ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ



ಯೇಸು ಕ್ರಿಸ್ತ ಮತ್ತೆ ಬರುತ್ತಾನೆ!

ಮೂಲ : ಮಾಲ್ಕಮ್ ಸ್ಕಾಟ್

ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕೆ ಪತ್ರ ಬರೆಯಬಹುದು

ನಮ್ಮ ವಿಳಾಸ :

The Christadelphians
PO Box **4237**
Bangalore 560042

ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 18

* ಸಹಾಯ ಹಸ್ತ
* ನಾಲಿಗೆಯನ್ನು ನಿಯಂತ್ರಿಸುವುದು
* ಈ ಹೊತ್ತೇ ಮಾಡು!
* ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು
* ಬಿತ್ತುವವನ ಸಾಮ್ಯ

ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಆಧಾರವಾಗಿ ಜೀವನವನ್ನು ನಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

Co-ordinator : Linus Daniel

e-mail :
info@choose2live.info
http://www.choose2live.info/noothana_shristi

Contact:
The Christadelphians,
P.O.Box No 535,
Bangalore 560 005,
India.

ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ಜೇಮ್ಸ್.ಡಿ
ಕಿರಣ್
ರೀಟಾ ಸತ್ಯರಾಜ್
ನರೋನ್ ದೇವ್
} ಭಾಷಾಂತರಕಾರರು

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]

ಸಹಾಯ ಹಸ್ತ

ನಾವು ಎಡವಿ ಬಿದ್ದಾಗ ಸಹಾಯ ಹಸ್ತವೊಂದು ನಮ್ಮನ್ನು ಎತ್ತಿ ನಿಲ್ಲಿಸುತ್ತದೆ. ಅಥವಾ ದೊಡ್ಡ ತಡೆಯೊಂದು ಎದುರಾದಾಗ ಯಾರಾದರೂ ಸಹಾಯ ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ. ಅಪಾಯದಲ್ಲಿದ್ದಾಗ ಇಂತಹ ಸಹಾಯವು ಜೀವನ್ಮರಣದ ಪರಿಸ್ಥಿತಿಯಿಂದ ನಮ್ಮನ್ನು ಕಾಪಾಡಬಲ್ಲದು.

ಅಪಾಯದ ಸಂದರ್ಭಗಳು :–

ಯಾರಿಗೆ ಆಗಲಿ, ಪ್ರಪಂಚದಲ್ಲಿ ಎಲ್ಲಿಯೇ ಆದರೂ, ಯಾವಾಗ ಬೇಕಾದರೂ ಏನಾದರೂ ಎಡವಟ್ಟು ಸಂಭವಿಸಬಹುದಾದಂತಹ ಕಾಲಮಾನದಲ್ಲಿ ನಾವು ಜೀವಿಸುತ್ತಿದ್ದೇವೆ. ನಮ್ಮ ಸಮಾಜದ ರಚನೆ ಹೆಚ್ಚು ಕ್ಲಿಷ್ಟವಾಗುತ್ತಾ ಹೋದಂತೆ, ದೊಡ್ಡ ಪ್ರಮಾಣದ ಅವಗಢ ಸಂಭವಿಸುವ ಸಾಧ್ಯತೆಯೂ ಹೆಚ್ಚುತ್ತಿರುತ್ತದೆ. ಪ್ರಮಾದಗಳು ನಡೆದಾಗ ಅವುಗಳನ್ನು ತಿದ್ದುವ, ಸರಿಪಡಿಸುವ ಕಾರ್ಯವೂ ಕಷ್ಟವಾಗಬಹುದು.

ಉದಾಹರಣೆಗೆ ಭೂಮಿಯ ಹೆಚ್ಚುತ್ತಿರುವ ತಾಪಮಾನವನ್ನೇ ತೆಗೆದುಕೊಳ್ಳೋಣ. ಸಾವಿರಕ್ಕೂ ಹೆಚ್ಚು ವಿಜ್ಞಾನಿಗಳು ಈಚೆಗೆ ಒಪ್ಪಿಕೊಂಡಿರುವಂತೆ, ನಾವೆಲ್ಲಾ ಭೂಮಿಯ ಏರುತ್ತಿರುವ ಉಷ್ಣತೆಯಿಂದಾಗಿ ಜಾಗತಿಕ ಸಂಕಷ್ಟವನ್ನು ಎದುರಿಸುತ್ತಿದ್ದೇವೆ. ಆದರೆ ಪರಿಸರವನ್ನು ಶುದ್ಧೀಕರಿಸಲು ಬೇಕಾದ ಉಪಾಯಗಳನ್ನು ಯೋಚಿಸುವಲ್ಲಿ ಸರಕಾರಗಳು ವಿಫಲವಾಗಿವೆ. ದೇಶಗಳ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕೆಂದು ಎಲ್ಲರೂ ಬಯಸುತ್ತಾರೆ. ಭಾರತ, ಚೀನ ಮುಂತಾದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜೀವನ ಮಟ್ಟವನ್ನು ಸುಧಾರಿಸಲು ಕ್ರಮ ಕೈಗೊಳ್ಳುವುದರ ಅಗತ್ಯವಿದೆ ಎನ್ನುವುದೂ ಗೊತ್ತು. ಹೆಚ್ಚಿನ ಕೈಗಾರಿಕಾ ಚಟುವಟಿಕೆ ಮತ್ತುಉಪಭೋಗ್ಯ ಸಾಮಾಗ್ರಿಗಳ ಉತ್ಪಾದನೆ ಪರಿಸರ ಮಾಲಿನ್ಯವನ್ನು ಹೆಚ್ಚಿಸುತ್ತದೆ.

ಕೆಲವರ್ಷಗಳ ಹಿಂದೆ ಸಂಯುಕ್ತ ರಾಷ್ಟ್ರಗಳ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಕೋಫಿ ಅನ್ನಾನ್ ಅವರು ಸಮುದ್ರ ಮಟ್ಟದ ಹೆಚ್ಚಳವು ಬಾಂಗ್ಲಾ ದೇಶದಂತಹ ಹೆಚ್ಚಿನ ತೀರಪ್ರದೇಶಗಳು ಕಣ್ಮರೆಯಾಗುವುದಕ್ಕೆ ಕಾರಣವಾಗುತ್ತದೆ ಎಂದು ಎಚ್ಚರಿಸಿದ್ದರು. ಧ್ರುವ ಪ್ರದೇಶಗಳ ಬರ್ಫವೂ ತೀವ್ರಗತಿಯಿಂದ ಕರಗುತ್ತಲಿದ್ದು, ಸಮುದ್ರ ಮಟ್ಟ ಮತ್ತಷ್ಟು ಹೆಚ್ಚಲು ಕಾರಣವಾಗುತ್ತಿದೆ.

ಯಾರ ಸಹಾಯ ಹಸ್ತ :–

ಮಾನವ ಚಟುವಟಿಕೆಗಳೇ ಪ್ರಸ್ತುತ ಅಪಾಯಕ್ಕೆ ಕಾರಣೀಭೂತವಾಗಿದ್ದರೆ, ನಾವೇನು ಮಾಡಲು ಸಾಧ್ಯ? 2005ನೇ ಇಸವಿಯ ಡಿಸೆಂಬರ್ ತಿಂಗಳಲ್ಲೇ 33 ರಾಷ್ಟ್ರಗಳ, 100ಕ್ಕೂ ಹೆಚ್ಚಿನ ನಗರಗಳ 10ಲಕ್ಷಕ್ಕೂ ಹೆಚ್ಚಿನ ಜನರು ರಸ್ತೆಗಿಳಿದು ಭೂಮಿಯ ತಾಪಮಾನದಲ್ಲಿನ ಹೆಚ್ಚಳವನ್ನು ನಿಯಂತ್ರಿಸಲು ಸರಕಾರಗಳು ಹೆಚ್ಚಿನ ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಅವರು ಎಚ್ಚರಿಕೆ ನೀಡುತ್ತಿದ್ದುದು ಮಾರಕ ಬಿರುಗಾಳಿಗಳು, ನಿಯಂತ್ರಣಕ್ಕೆ ಸಿಲುಕದ ರೋಗಗಳು, ಏರುತ್ತಿರುವ ಸಮುದ್ರ ಮಟ್ಟ, ವಿನಾಶದ ಅಂಚಿನಲ್ಲಿರುವ ವನ್ಯಜೀವನ, ನೀರಿನ ಬರ ಮತ್ತು ವ್ಯವಸಾಯದಲ್ಲಿನ ಏರಿಳಿತಗಳು, ಇವುಗಳ ಬಗ್ಗೆ. ಮನುಷ್ಯ ಕುಲವೇ ಭೂಮಿಯ ವಿನಾಶಕ್ಕೆ ಕಾರಣ ಎಂದವರು ಹೇಳುತ್ತಿದ್ದರೂ, ಅದರ ಬಗ್ಗೆ ನಾವೇನು ಮಾಡಲು ಸಾಧ್ಯ?

ಆದರೆ ನಾವು ಮಾಡಬಹುದಾಂತಹ, ನಮ್ಮ ಮನೆಗಳನ್ನು ವಿದ್ಯುತ್ ನಿರೋಧಕ ಗೊಳಿಸುವುದು, ವಿದ್ಯುತ್ ಉಪಕರಣಗಳನ್ನು ಬಳಸದಿರುವುದು, ಕಸದ ಮರುಉಪಯೋಗ ಇವುಗಳಿಗಿಂತ ಬೇರೆಯೇ ಆದ ಒಂದು ಕೆಲಸವೆಂದರೆ, ದೇವವ ಸಹಾಯಕ್ಕಾಗಿ ಕೈಚಾಚುವುದು. ದೇವರು ನಮಗೆ ಸಹಾಯ ಮಾಡಲೆಂದೇ ಕಾದಿದ್ದಾನೆ. ಹಿಂದೊಮ್ಮೆ ಇಸ್ರಾಯೇಲ್ ದೇಶವು ಮೇಲಿಂದ ಮೇಲೆ ಬಂದರಗಿದ ವಿಪತ್ತುಗಳಿಂದ ಜರ್ಜರಿತವಾಯಿತು, ಮಿಡತೆಗಳ ದಂಡು ಬೆಳೆಯನ್ನು ನಾಶ ಮಾಡಿದ ನಂತರ, ಶತ್ರು ಸೈನ್ಯವು ದೇಶವನ್ನು ನೆಲಸಮ ಮಾಡಿತು. ಆಹಾರದೊಂದಿಗೆ ಸ್ವಾತಂತ್ರವೂ ಇಲ್ಲದಂತಾಯಿತು. ಆಗ ಯೋವೇಲ ಪ್ರವಾದಿಯು ಹೀಗೆ ಪ್ರವಾದಿಸಿದ –"ಯೆಹೋವನು ಇಂತೆನ್ನುತ್ತಾನೆ–ಈಗಲಾದರೋ ನೀವು ಮನಃಪೂರ್ವಕವಾಗಿ ನನ್ನ ಕಡೆಗೆ ತಿರುಗಿಕೊಂಡು ಉಪವಾಸ ಮಾಡಿರಿ, ಅಳಿರಿ, ಗೋಳಾಡಿರಿ; ನಿಮ್ಮ ಬಟ್ಟೆಗಳನ್ನಲ್ಲ, ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರುಗಿಕೊಳ್ಳೀರಿ; ಆತನು ದಯೆಯೂ, ಕನಿಕರವೂ, ದೀರ್ಘಶಾಂತಿಯೂ, ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕಿಂದಿದ್ದ ಕೇಡಿಗೆ ಮನಮರುಗುತ್ತಾನೆ" (ಯೋವೇಲ 2:12–13).

ಸಹಾಯ ಮಾಡಲು ದೇವರ ಕೈ ಮುಂದಾಗಿದೆ :–

ನಮಗೆ ಸಹಾಯ ಮಾಡಲು, ದೇವರು ನಮ್ಮ ಪ್ರತಿಕ್ರಿಯೆಗಾಗಿ ಕಾದಿದ್ದಾನೆ. 2000 ವರ್ಷಗಳ ಕಾಲ ದೇಶದಿಂದ ಚದರಿಹೋಗಿದ್ದ ಇಸ್ರಾಯೇಲ್ಯರು, ದೇವರ ಸಹಾಯದಿಂದ ತಮ್ಮ ದೇಶಕ್ಕೆ ಭವ್ಯರೀತಿಯಲ್ಲಿ ಹಿಂದಿರುಗಿದರು. ದೇವರ ಸ್ನೇಹಿತ ಎಂದು ಹೆಸರುಗೊಂಡ ಅಬ್ರಹಾಮನ ಸಂತತಿಯಾದ ಇಸ್ರಾಯೇಲ್ಯರನ್ನು ದೇವರು ಕಾಪಾಡುವವನಾಗಿದ್ದಾನೆ, ಅವರನ್ನು ಆಧರಿಸಲು ಯಾವಾಗಲೂ ಸಿದ್ಧವಾಗಿದ್ದಾನೆ. ತನ್ನ ಜನರನ್ನು ಕುರಿತು ದೇವರು ಹೀಗೆ ತಿಳಿಸಿದ್ದಾನೆ–"ನನ್ನ ಸೇವಕನಾದ ಇಸ್ರಾಯೇಲೇ, ನಾನು ಆದುಕೊಂಡ ಯಾಕೋಬೇ, ನನ್ನ ಸ್ನೇಹಿತನಾದ ಅಬ್ರಹಾಮನ ಸಂತತಿಯೇ, ನಾನು ಭೂಮಿಯ ಕಟ್ಟಕಡೆಯಿಂದ ಹಿಡಿದು, ದಿಗಂತಗಳಿಂದ ಕರೆದ ಜನವೇ, ನೀನು ನನ್ನ ಸೇವಕನು, ನಾನು ನಿನ್ನನ್ನು ಆರಿಸಿಕೊಂಡೆನು, ತಳ್ಳಲಿಲ್ಲ.....ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು ನಿನಗೆ ಸಹಾಯ ಕೊಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡುತ್ತೇನೆ" (ಯೆಶಾಯ 41:8–10).

ಹೀಗೆಯೇ ಭೂಮಿಯನ್ನು ಕಾಪಾಡಬೇಕೆಂಬುದು ದೇವರ ಇಚ್ಛೆಯಾಗಿದೆ. ಜನರು ಕೈಚಾಚಿ ದೇವರ ಸಹಾಯವನ್ನು ಬೇಡಬೇಕು. ಜನರು ಸಹಾಯ ಬೇಡಲಿ ಬಿಡಲಿ, ದೇವರು ಬಹಳ ಬೇಗ ಹಸ್ತಕ್ಷೇಪ ಮಾಡಿ ಭೂಮಿಯನ್ನು ನಾಶದಿಂದ ತಪ್ಪಿಸಲಿದ್ದಾನೆ! ರಕ್ಷಿಸಲ್ಪಡಲು ಇಚ್ಛಿಸುವವರನ್ನು ಕಾಪಾಡಿ, ಪ್ರಪಂಚವನ್ನು ಹಿಂದಿನ ಆರೋಗ್ಯಕರ ಸ್ಥಿತಿಗೆ ತಲುಪಿಸುತ್ತಾನೆ. ಇಂತಹ ಕಾರ್ಯವು ದೇವರಿಂದ ಮಾತ್ರ ಸಾಧ್ಯ. ನಿಮಗೂ ರಕ್ಷಿಸಲ್ಪಡುವವರೊಂದಿಗೆ ಸೇರಿಕೊಳ್ಳಬೇಕಿದೆಯೇ? ಹಾಗದರೆ ಇಗೋ ದೇವರ ಸಹಾಯ ಹಸ್ತ.

ಓದುವುದರ ಮೂಲಕ ಶ್ರೀಮಂತರಾಗಿ :–

ಸತ್ಯವೇದ ವಾಚನದ ಮೂಲಕ ದೇವರ ಕೃಪಾಪೂರ್ಣ ಉದ್ದೇಶವನ್ನು ಅರಿತುಕೊಳ್ಳಲು ಅದು ಸಹಾಯಕ. ನೀವೂ ನಿಮ್ಮ ಕುಟುಂಬದವರೂ ಬರಲಿರುವ ಜಾಗತಿಕ ವಿಪತ್ತಿನಿಂದ ಪಾರಾಗಲು ಇದಕ್ಕಿಂತ ಉತ್ತಮ ಉಪಾಯವಿಲ್ಲ. ಮನುಷ್ಯರ ಸರಕಾರಗಳು ಎಲ್ಲರನ್ನೂ ತೃಪ್ತಿಪಡಿಸಿ, ಅಧಿಕಾರದಲ್ಲಿ ಉಳಿಯುವುದು ಹೇಗೆ ಎಂಬ ಚಿಂತೆಯಲ್ಲಿಯೇ ಇವೆ. ಪರಿಸ್ಥಿತಿಯನ್ನು ಎದುರಿಸಲು ಯಾವುದೇ ನಿರ್ಧಾರಿತ ಕಾರ್ಯಯೋಜನೆಗಳನ್ನು ಕೈಗೊಳ್ಳುವುದು ಅವುಗಳಿಂದ ಅಸಾಧ್ಯ. ಕಾರ್ಯತಃ ಏನನ್ನೂ ಮಾಡದೆ, ಬರಿಯ ಮಾತಿನಲ್ಲೇ ಎಲ್ಲವನ್ನೂ ಮುಗಿಸುತ್ತವೆ.

ಆದರೆ ದೇವರಿಗೋ, ಬಹಳ ಹಿಂದೆಯೇ ರೂಪುಗೊಂಡ ಕಾರ್ಯಯೋಜನೆಯಿದೆ. ನೀವು ದಿನದಲ್ಲಿ ಕೆಲನಿಮಿಷಗಳನ್ನು ದೇವರ ಬಗ್ಗೆ ತಿಳಿದುಕೊಳ್ಳಲು ಮೀಸಲಾಗಿರಿಸಿದರೆ, ಈ ಕಾರ್ಯಯೋಜನೆಯ ಬಗ್ಗೆ ಓದಬಹುದು. ರಕ್ಷಕನಾದ ಯೇಸುಕ್ರಿಸ್ತನು, ಭೂಮಿಯ ಮೇಲೆ ಮುಂದೆ ಸ್ಥಾಪಿಸಲ್ಪಡುವ ದೇವರ ರಾಜ್ಯ, ಅದಕ್ಕಾಗಿ ನಾವು ಮಾಡಿಕೊಳ್ಳಬೇಕಾದ ಸಿದ್ಧತೆ, ಮುಂತಾದವುಗಳ ಬಗ್ಗೆ ತಿಳಿಯಬಹುದು.

ಭೂಮಿಯೂ, ಅದರ ನಿವಾಸಿಗಳೂ ಲೆಕ್ಕ ಒಪ್ಪಿಸಲು ಕರೆಸಲ್ಪಡುತ್ತಾರೆ, ದೇವರ ವಿರುದ್ಧ ದಂಗೆಯೆದ್ದ ಅನೇಕರು ನಾಶವಾಗುತ್ತಾರೆ. ಏಕಂದರೆ ಅವರು ದೇವರ ಮಹಾಯೋಜನೆಯ ಬಗ್ಗೆ ಏನನ್ನೂ ತಿಳಿದುಕೊಂಡಿರುವುದಿಲ್ಲ.1900 ವರ್ಷಗಳಿಗೂ ಹಿಂದೆ ಬರೆಯಲ್ಪಟ್ಟ ಸತ್ಯವೇದದ ವಾಕ್ಯಗಳು ಎಷ್ಟು ಪ್ರಸ್ತುತವಾಗಿವೆ ಎಂಬುದನ್ನು ಗಮನಿಸಿ – "ಆಗ ಪರಲೋಕದಲ್ಲಿ ಮಹಾಶಬ್ದಗಳುಂಟಾಗಿ–ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ, ಆತನು ಅಭಿಷೇಕಿದವನಿಗೂ ಉಂಟಾಯಿತು; ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವವನು.....ಜನಾಂಗಗಳು ಕೋಪಿಸಿಕೊಂಡವು, ನಿನ್ನ ಕೋಪವು ಪ್ರಕಟವಾಯಿತು, ಸತ್ತವರು ತೀರ್ಪುಹೊಂದುವ ಸಮಯ ಬಂದಿದೆ; ನೀನು ನಿನ್ನ ದಾಸರಾದ ಪ್ರವಾದಿಗಳಿಗೂ, ದೇವಜನರಿಗೂ ನಿನ್ನ ನಾಮಕ್ಕೆ ಭಯಪಡುವ ದೊಡ್ಡವರಿಗೂ, ಚಿಕ್ಕವರಿಗೂ ಪ್ರತಿಫಲವನ್ನು ಕೊಟ್ಟು ಲೋಕನಾಶಕರನ್ನು ನಾಶಮಾಡುವಿ–ಎಂದು ಆತನನ್ನು ಆರಾಧಿಸಿದರು" (ಪ್ರಕಟಣೆ 11:15–18).

ಆದರೆ ತಮ್ಮ ಜೀವನದಲ್ಲಿ ದೇವರ ಆಳ್ವಿಕೆಯನ್ನು ಸ್ವೀಕರಿಸಿರುವ ಮತ್ತು ಆತನ ನಿಯಮಾನುಸಾರ ಜೀವಿಸಲು ಕಲಿತಿರುವ ಎಲ್ಲರೂ, ಇದಕ್ಕಿಂತ ಉತ್ತಮ ಪ್ರಪಂಚದಲ್ಲಿ ಒಳ್ಳೆಯ ಕಾಲವನ್ನು ನಿರೀಕ್ಷಿಸಬಹುದು.

ನಾಲಿಗೆಯನ್ನು ನಿಯಂತ್ರಿಸುವುದು

(ಭಾಗ – 2)

ಅಧ್ಯಯ ಪ್ರಕರಣ – 03

ಒಬ್ಬ ಕಠಿಣಕರ ಧಣಿ/ಯಜಮಾನ

ನಿಮ್ಮ ಧಣಿ ಒಬ್ಬ ಗರಿಷ್ಟ ಯಶಸ್ವಿ ವ್ಯಾಪಾರಿಯಾಗಿರಬಹುದು, ತಾಂತ್ರಿಕತೆಯಲ್ಲಿ ನಿಪುಣನೂ, ಜ್ಞಾನಿಯೂ, ತುಂಬಾಕಡೆ ಸಂಚರಿಸಿದವನಾಗಿರಬಹುದು. ಮತ್ತು ಇವುಗಳಲ್ಲಿ ಆತನಿಗೆ ತನ್ನವೋಲೆ ಹೆಮ್ಮೆ ಇದ್ದು ನಿಮ್ಮನ್ನು ಆಳಿನ ಹಾಗೆ ಇಟ್ಟಿರಬಹುದು. ಮತ್ತು ನೀನು ಅಮವ ಕೈಕೆಳಗೆ ದುಡಿಯುತ್ತಾ ಕಷ್ಟಪಡುತ್ತಿರಬಹುದು ಮತ್ತು ನಿನ್ನಿಂದ ಜಾಸ್ತಿವೇಳೆ ದುಡಿಮೆ ಮಾಡಿಸಿದ್ದು, ಭಾನುವಾರ ಮತ್ತು ರಜಾ ದಿನಗಳಲ್ಲೂ ನಿನಗೆ ರಜೆ ಕೊಟ್ಟಿಲ್ಲದಿರಬಹುದು. ಆಗ ನೀನೇನು ಮಾಡುವೆ? ಅಂಥಹ ಸಿಂಹ(ನಿನ್ನ ಯಜಮಾನ)ವನ್ನು ಹೇಗೆ ಪಳಗಿಸುವಿ?

ಅ) ದೃಢತೆಯಿಂದ ನಿನ್ನ ಪಾಲಿನ ನ್ಯಾಯವಾದ ಹಕ್ಕುಗಳನ್ನು ಆತನ ಮುಂದಿಡು.

ಆ) ಒಂದು ವೇಳೆ 3–4 ವರ್ಷಗಳೂ ಮುಂದುವರೆದಾಗ ತನಗೆ ಬೇರೆಕಡೆಯಲ್ಲಿ ಕೆಲಸ ಹುಡುಕುವ ಹಕ್ಕಿದೆ ಎಂದು ತಿಳಿಸಿ.

ಇ) ನಿನ್ನ ಬಾಸಿಗೆ(ಯಜಮಾನ) ಯಾವುದೇ ಕಾರ್ಯದ ಬಗ್ಗೆ ಆತನು ಶಾಂತವಾಗಿರುವಾಗ ವಿಷಯವನ್ನು ವಿವರಿಸಿ ಹೇಳಿ. ನೀವು ದುಡಿಯುತ್ತಿರುವಾಗ ನಿಮ್ಮ ಕುಟುಂಬದಿಂದ ದೂರವಿದ್ದು, ಜಾಸ್ತಿ ಗಂಟೆಗಳ ಕಾಲ ಶ್ರಮೆಯೊಡನೆ, ಸಹನೆಯಿಂದ ಕಾರ್ಯ ಮಾಡಿದ್ದೇನೆಂದು, ಅದರ

ಬಗ್ಗೆ ನಿರ್ಣಯ ತೆಗೆದುಕೊಂಡು, ತನ್ನನ್ನು ಒಳ್ಳೇ ದರ್ಜೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಕೊಡಬೇಕೆಂದು ತಿಳಿಸಿ.

ಈ) ಆತನು ಅದೆಷ್ಟು ಸಫಲನಾಗಿದ್ದಾನೆಂತಲೂ, ನೀನು ಆತನಲ್ಲಿ ದುಡಿಯಲು ಇಷ್ಟಪಡುವುದಾಗಿಯೂ, ಅದು ನಿನಗೆ ಸ್ಫೂರ್ತಿದಾಯಕವೆಂದೂ ತಿಳಿಸಿ.

ಉ) ಒಳ್ಳೇ ಶ್ರಮಪಟ್ಟು, ಆತನ ಪಾಡಿಗೆ ಅನುಗ್ರಹಿಸಿ, ಇನ್ನಷ್ಟು ನಿರಂತರ ಪರಿಶ್ರಮಶೀಲಕ್ಕೆ ಕರೆ ಕೊಟ್ಟಾನು, ಆ ಒಂದು ದಿವಸ ನಿನ್ನ ಮೂಲಕ ಆತನು ಪ್ರಭಾವಗೊಂಡಿರುವುದಾಗಿದೆ.

ಊ) ಅವನಲ್ಲಿನ ಕೆಲವು ಕಾರ್ಯಗಳು ನಿನ್ನ ಜೀವನದಲ್ಲಿ ಬಿರುಗಾಳಿ ತರಲು ಕಾರಣವಾದಾಗ ನೀನು ಅಂತಹ ಮಾನನಷ್ಟ ಕಾರ್ಯಗಳನ್ನು ಮಾಡುವುದಕ್ಕಿಂತ, ನಿನ್ನ ಕೆಲಸವನ್ನೇ ತ್ಯಾಗಮಾಡು. ಆದರ ಒಳ್ಳೇ ಸುದ್ದಿಯೇನೆಂದರೆ ಜಾಣತನದಿಂದ ಸಿಂಹಗಳನ್ನು ಪಳಗಿಸಬಹುದಾಗಿದೆ.

"ಭೂಪನ ಕೋಪ ಮೃತ್ಯುವಿನ ದೂತ; **ಜಾಣನು ಅದನ್ನು ಶಮನಪಡಿಸುವನು**"

ಇನ್ನೂ ಕೆಲವು ಸಲಹೆಗಳು – ಸತ್ಯವೇದ ಆಧಾರಿತ :–

1) ನಿಮ್ಮ ಯಜಮಾನನು ಒಬ್ಬ ಸಿಂಹವೆಂದು ತಿಳಿದುಕೊಳ್ಳಿ. ಏಕಂದರೆ ಅವನು ನಿಮ್ಮನ್ನು ಯಾವ ಸಂದರ್ಭದಲ್ಲೂ ಕೂಡ ಕೆಲಸದಿಂದ ತೆಗೆದುಹಾಕಬಹುದು; ಆ ಅಧಿಕಾರ ಅವನಿಗೆ ಇದೆ. ರಾಜನಾದವನು ಯಾವ ರೀತಿ ವರ್ತಿಸಬಹುದು? ರಾಜನು ನಿಮ್ಮನ್ನು ಶಿಕ್ಷಿಸಲೂಬಹುದು, ಅಥವಾ ಆಶೀರ್ವಾದ ನೀಡಿ ನಿಮ್ಮನ್ನು ಉನ್ನತಿಗೆ ತರಲೂಬಹುದು ಅಲ್ಲವೇ!

"ರಾಜನು ಗರ್ಜಿಸುವ ಸಿಂಹದಂತೆ ಭಯಂಕರನು, ಅವನನ್ನು ಕೆಣಕುವವನು ತನಗೇ ಕೇಡು ಮಾಡಿಕೊಳ್ಳುವನು" (ಜ್ಞೋನೋಕ್ತಿಗಳು 20:2).

"ರಾಜನ ರೋಷವು ಸಿಂಹದ ಗರ್ಜನೆ; ಅವನ ದಯೆಯು ಪೈರಿನ ಇಬ್ಬನಿ" (ಜ್ಞಾನೋಕ್ತಿಗಳು 19:12).

2) ನಿಮ್ಮ ಯಜಮಾನನನ್ನು ತಿಳಿದುಕೊಳ್ಳಿ, ಅವನಿಗೆ ಹಿತಕರ ಮತ್ತು ಅಸಹ್ಯಕರವಾದದ್ದು ಏನೆಂದು ಚೆನ್ನಾಗಿ ತಿಳಿದವರಾಗಿರಿ. ನಿಮ್ಮ ಯಜಮಾನನಿಗೆ ನೀವು ಸುಮ್ಮನೆ ಕೆಲವು ಸುಳ್ಳಾದ ಕಾರ್ಯಗಳಿಂದ ವಂಚಿಸಬೇಡಿರಿ. ಆದರೆ ನಿಜವಾಗಿಯೂ ಅರ್ಥ ಮಾಡಿಕೊಂಡು ದೃಢ ಹಾಗೂ ಅವಿರತ ಯತ್ನದಿಂದ ಕಾರ್ಯನಿರ್ವಹಿಸಿರಿ. ನಿಮ್ಮ ಯಜಮಾನ ಕಛೇರಿಗೆ ಬರುವುದಕ್ಕಿಂತ ಮುಂಚಿತವಾಗಿಯೇ ಕಛೇರಿಯಲ್ಲಿ ಹಾಜರಿರಿ. ನಿಮ್ಮ ಧಣಿಯು ಒಂದು ವೇಳೆ ಟೆನ್ನಿಸ್ ಆಟದ ಬಗ್ಗೆ ಹೆಚ್ಚು ಚರ್ಚೆ ಮಾಡಿದರೆ ಆ ವಿಷಯದಲ್ಲಿ ನಿಮ್ಮ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿ. ಅವನಿಗೆ ಕಾಗದದ ಮತ್ತಿತರ ಚೂರು, ಕಸ ಇತರ ಯಾವುದೇ ಅಶುದ್ಧತೆ ಇಲ್ಲದ ರೀತಿಯಲ್ಲಿ ಶುದ್ಧತೆಯನ್ನು ಕಾಪಾಡಿ. ನಿಮ್ಮ ಹುದ್ದೆಯು ಯಾವುದಾದರೂ ಆಗಿರಬಹುದು ಅದು–ಮ್ಯಾನೇಜರ್, ಪೇದೆ, ಕಾರ್ಯನಿರ್ವಾಹಕ, ಸೇವಕ ಆಗಿರಬಹುದು. ಆದರೆ ಎಲ್ಲ ವಿಷಯಗಳಲ್ಲಿ ನೀವು ನಿಮ್ಮ ಕೆಲಸಗಳಲ್ಲಿ ಜವಾಬ್ದಾರಿಯಿಂದಿರಿ.

"ಜಾಣನಾದ ಸೇವಕನಿಗೆ ರಾಜನ ಕೃಪೆ" (ಜ್ಞಾನೋಕ್ತಿಗಳು 14:35).

3) ಈ ಆಧುನಿಕ ಯುಗದಲ್ಲಿ ಒಂದು ಸಂಸ್ಥೆಯಾಗಿ ಏರ್ಪಾಡಾದ ಜಾಗದಲ್ಲಿ ನಿನ್ನ ಧಣಿ ನಿನ್ನ ಸಂಗಾತಿಯಾಗಿದ್ದು ಒಳ್ಳೆಯ ಸಂಬಂಧ ಇಟ್ಟಿರಲು ಸಾಧ್ಯ, ಮತ್ತು ಉತ್ತಮ ಆದರೆ ಕೆಲವು ಅಶ್ಲೀಲ ಜಗತ್ತಿನ ಕಂಪನಿಯ ಧಣಿಗಳು ಅಶ್ಲೀಲವಾಗಿರಲೂ ಸಾಧ್ಯ!

ಕಾರ್ಯಕರ್ತರು ಮತ್ತು ಸಹೋದ್ಯೋಗಿಗಳು ಅದರಲ್ಲಿ ಸೇರಿರಬಹುದು. ನೆನಪಿರಲಿ, ನಾವು ಮೊದಲನೆಯದಾಗಿ ಕ್ರಿಸ್ತನ ಅನುಯಾಯಿಗಳಾಗಿದ್ದೇವೆಂಬುದು ನನ್ನ ಕಾರ್ಯಗಳಲ್ಲಿ ತೋರ್ಪಡಿಸೋಣ.

ಸಮ್ಮಿಳಿತ ಸಂಸ್ಥೆಯಾಗಿ ಏರ್ಪಟ್ಟ ಪ್ರಪಂಚದಲ್ಲಿ ನಮಗೆ ಪ್ರಾಪಂಚಿಕ ಯಶಸ್ವಿಯನ್ನು ಭದ್ರತೆಯನ್ನು ಮತ್ತು ಹೆಮ್ಮೆಯನ್ನು ಪ್ರಪಂಚವೇ ಕಲಿಸುವಾಗ, ಕ್ರಿಸ್ತನು ನಮಗೆ ನಮ್ರತೆಯನ್ನು ಕಲಿಸಿದನು! ಅವನು ರಾಜನು ಮತ್ತು ಮೇಲಾಧಿಕಾರಿಯಾಗಿದ್ದರೂ ತನ್ನ ಶಿಷ್ಯರ ಕಾಲುಗಳನ್ನು ತೊಳೆದನು ಮತ್ತು ತನ್ನನ್ನು ತಾನು ತಗ್ಗಿಸಿಕೊಂಡನು. ಆ ವಿಧೇಯತೆಯ ರೇಖೆಯನ್ನು ನಿನ್ನ ಸಹೋದ್ಯೋಗಿಗಳಿಗೂ, ಮೇಲಾಧಿಕಾರಿಗೂ ನೀವು ಕ್ರಿಸ್ತನ ಮೂಲಕ ತೋರ್ಪಡಿಸುವಂತವರು ಆಗಿರಬೇಕು.

4) ನೀವೊಂದು ಸಂಸ್ಥೆಯ ನೌಕರರಾಗಿದ್ದು ನಿಮಗೆ ಬೈಗಳು ಕೇಳಸಿಗಬಹುದು. ಆಗ ನಿಮ್ಮ ಮೇಲಾಧಿಕಾರಿಯನ್ನು ಹೇಗೆ ಪಳಗಿಸುವಿರಿ? ಅಂತಹ ಸಂದರ್ಭಗಳಲ್ಲಿ ಪರಿಶ್ರಮಶೀಲರಾಗಿರಿ ಮತ್ತು ನಿನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳಿ.



ಈ ವಿಷಯವಾಗಿ ಅಪೋಸ್ತಲನಾದ ಪೇತ್ರನು ಈ ರೀತಿಯಾಗಿ ತಿಳಿಸಿಕೊಡುತ್ತಾನೆ– "ತಪ್ಪುಮಾಡಿ ಗುದ್ದು ತಿನ್ನುವುದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವುದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯ(ಸ್ವೀಕಾರ)ವಾಗಿದೆ" (1ಪೇತ್ರ 2:20).

5) ಕ್ರಿಯೆಗಳು ಶಬ್ದಗಳಿಗಿಂತ ಗಟ್ಟಿಯಾಗಿ ಮಾತನಾಡುತ್ತವೆ. ನೀವೆಷ್ಟು ಉತ್ತಮರೆಂದು ಬಡಾಯಿ ಕೊಚ್ಚಿಕೊಳ್ಳಬೇಡಿ. ಅದನ್ನು ಇನ್ನೊಬ್ಬರು ಹೇಳಲಿ, ನಿನ್ನದೇ ತುತ್ತೂರಿಯನ್ನು ನೀನೂದಬೇಡ(ತನ್ನ ಬಣ್ಣಿಸಬೇಡ). "ರಾಜನ ಸನ್ನಿಧಾನದಲ್ಲಿ ನಿನ್ನನ್ನು ಹೆಚ್ಚಿಸಿಕೊಳ್ಳಬೇಡ, ಶ್ರೀಮಂತರಿಗೆ ಏರ್ಪಡಿಸಿರುವ ಸ್ಥಾನದಲ್ಲಿ ನಿಂತುಕೊಳ್ಳದಿರು. ನಿನ್ನ ಪ್ರಭುವನ್ನು ಅಲ್ಲಿನ ಅಧಿಕಾರಿಯನ್ನು ದರ್ಶನ ಮಾಡುತ್ತಿರಲು ನೀನು ಕೆಳಗಣ ಸ್ಥಾನಕ್ಕೆ ನೂಕಿಸಿಕೊಳ್ಳುವುದಕ್ಕಿಂತಲೂ, ಇನ್ನೂ ಮೇಲಕ್ಕೆ ಬಾ ಎಂದು ಕರೆಯಿಸಿಕೊಳ್ಳುವುದೇ ಲೇಸು" (ಜ್ಞಾನೋಕ್ತಿಗಳು 25:6–7).

6) ಒಳ್ಳೆಯ ಕಾರ್ಯಗಳೊಂದಿಗೆ ಮುಂದುವರೆಯಲು ಸತತ ಬೀಗದ ಕೈ ಸಿದ್ಧವಿರಬೇಕು. ನಿನ್ನ ಮೇಲಾಧಿಕಾರಿಯೊಂದಿಗೆ ಮಾತ್ರವೇ ಅಲ್ಲ, ನಿನ್ನ ಅಧೀನದಲ್ಲಿ ಇರುವರೊಂದಿಗೂ ಹಾಗೆಯೇ ವರ್ತಿಸಬೇಕು. ಆತ್ಮಪ್ರಿಯನ ಪ್ರೀತಿಯೊಂದಿಗೆ ಅಂತಹವರ ಹೃದಯವನ್ನು ನೀವು ಗೆಲ್ಲುವಿರಿ. ರಾಜನೀತಿ ಅಧಿಕಾರಿ(ಮಂತ್ರಿ)ಗಳೊಂದಿಗೂ ನಾವು ಅಧೀನರಾಗಬೇಕು.

"ಅಧಿಪತಿಗಳಿಗೂ ಅಧಿಕಾರಿಗಳಿಗೂ, ಅಧೀನರಾಗಿ ವಿಧೇಯರಾಗಿರಬೇಕಂತಲೂ, ಯಾರನ್ನೂ ದೂಷಿಸದೆ ಕುತರ್ಕಮಾಡದೆ ಎಲ್ಲಾ ಮನುಷ್ಯರಿಗೆ ಪೂರ್ಣ ಸಾಧುಗುಣವನ್ನು ತೋರಿಸುತ್ತಾ ಸಾತ್ವಿಕರಾಗಿರಬೇಕಂತಲೂ ಅವರಿಗೆ ಜ್ಞಾಪಕಕೊಡು" (ತೀತ 3:1–2).

7) ದೇವರೊಂದಿಗೆ ಪ್ರಾಮಾಣಿಕವಾಗಿರಿ, ಒಳ್ಳೇ ಉದ್ದೇಶದೊಂದಿಗೆ ಕಾರ್ಯಪ್ರವೃತ್ತರಾಗಿರಿ. ಜ್ಞಾಪಕವಿರಲಿ ಪ್ರಿಯರೇ, ನಾವು ಈ ಅಳಿದುಹೋಗುವ ಶರೀರಗಳಲ್ಲಿ ಜೀವಿಸುವಾಗಲೂ ಒಬ್ಬ ಕ್ರಿಸ್ತೀಯನಾಗಿ ನೆರೆಹೊರೆಯವರೊಂದಿಗೆ ಅವರ ಪ್ರೀತಿ ವಾತ್ಸಲ್ಯಕ್ಕೆ ಪಾತ್ರರಾಗಿ ಜೀವಿಸಬೇಕು. ಇದೆಲ್ಲಾ ಪ್ರೀತಿಯ ಮೂಲಕ ಮಾತ್ರ ಸಾಧ್ಯ.

ನಿಮ್ಮ ಮೇಲಾಧಿಕಾರಿ/ಧಣಿ ಸಮೀಪವಿರುವಾಗ ಒಂದುರೀತಿ, ಇಲ್ಲದೆ ಇರುವಾಗ ಇನ್ನೊಂದು ರೀತಿಯ ಕಾರ್ಯ ಮಾಡಬಾರದು. ಪ್ರಾಮಾಣಿಕರಾಗಿ ಶ್ರದ್ಧೆಯಿಂದ ನೀವು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವುದಾದರೆ ನಿಮ್ಮ ಮೇಲಾಧಿಕಾರಿಯ ನಂಬಿಕೆಗೆ ಖಂಡಿತ ಪಾತ್ರರಾಗಬಹುದು. ಉದಾ:–ನಿನ್ನ ಮೇಲಾಧಿಕಾರಿಯ ಗೈರುಹಾಜರಿಯಲ್ಲಿ ನೀವು ಒಂದುವೇಳೆ ಕಂಪೂಟರಿನಲ್ಲಿ ಆಟವಾಡುವುದು, ಆತನು ಹಾಜರಿರುವಾಗ ಮೆಲ್ಲನೆ ಕೆಲಸದಲ್ಲಿ ತೊಡಗಿಸಿಕೊಂಡು ವಂಚಿಸುವುದು ಸರಿಯೇ? ಪ್ರಿಯಾರೇ ನಮ್ಮೆಲ್ಲರಿಗೆ ಒಬ್ಬ ಅನಂತಕಾಲಿಕ ರಾಜನಿದ್ದಾನೆ, ಆತನು ನಮ್ಮ ವಿಚಾರ ಮತ್ತು ಕ್ರಿಯೆಗಳನ್ನೆಲ್ಲಾ ವೀಕ್ಷಿಸುವವನಾಗಿದ್ದಾನೆ.

ಅಪೋಸ್ತಲನಾದ ಪೌಲನು ಈ ವಿಷಯವಾಗಿ ವಿವರಣೆ ಕೊಡುತ್ತಾನೆ– "ದಾಸತ್ವದಲ್ಲಿರುವವರೇ ಈ ಲೋಕದಲ್ಲಿರುವ ನಿಮ್ಮ ಯಜಮಾನರಿಗೆ ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ. ಮನುಷ್ಯರನ್ನು ಮೆಚ್ಚಿಸುವ ಪ್ರಕಾರ ನಿನ್ನ ಯಜಮಾನನು ನೋಡುತ್ತಿರುವಾಗ ಮಾತ್ರ ಸೇವೆ ಮಾಡುವುದೇನು? ಕರ್ತನಿಗೆ ಭಯಪಡುವವನಾಗಿ ಸರಳ ಮನಸ್ಸಿನಿಂದ ಕಾರ್ಯಮಗ್ನನಾಗು. ಯಾವ ಕಾರ್ಯವಾದರೂ ಅದನ್ನು ಮನುಷ್ಯರಿಗೋಸ್ಕರ ಎಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡು. ಕರ್ತನಿಂದ ಪರಲೋಕಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವಿ ಎಂದು ತಿಳಿದಿದ್ದಿರಲ್ಲಾ? ನೀವು ಕರ್ತನಾದ ಯೇಸುಕ್ರಿಸ್ತನಿಗೆ ದಾಸರಾಗಿದ್ದೀರಿ" (ಕೊಲೊಸ್ಸೆಯವರಿಗೆ 3:22–24).

"ರಾಜರು ಸತ್ಯದ ತುಟಿಗಳನ್ನು ಮೆಚ್ಚುವರು, ಯತಾರ್ಥವಾದಿಯನ್ನು ಪ್ರೀತಿಸುವರು" (ಜ್ಞಾನೋಕ್ತಿಗಳು 16:13).

8) ಪ್ರಿಯರೇ, ಧೈರ್ಯಗುಂದದಿರಿ ನಮ್ಮ ನಿರೀಕ್ಷೆಯು ಸದಾ ಕರ್ತನಲ್ಲಿ ಅನ್ವಯವಾಗಿದೆ. ಪ್ರತಿಜ್ಞೆಗಳಗೂಡಿದೆ, ಮತ್ತು ಕರ್ತನ ಹತೋಟಿಯಲ್ಲಿ ನಿಯಂತ್ರಣದಲ್ಲಿದೆ. ನಿಮ್ಮ ಧಣಿಗೆ ನಿಮ್ಮ ಶ್ರದ್ಧೆಯ ಬಗ್ಗೆ ಅರಿವಾಗದೆ ನಿನ್ನನ್ನು ದುಷ್ಟ, ಕಪಟಿ ಎಂದು ಹಿಯಾಳಿಸಿದರೂ ಸರಿ, ಧರ್ಮಿ ಮತ್ತು ನ್ಯಾಯವಾದ ಅರಸನು ನಿಮಗೆ ಖಂಡಿತವಾಗಿ ಬಹುಮಾನವನ್ನು ಇರಿಸಿದ್ದಾನೆ.

"ಬಹಳ ಜನರು ಅರಸನ/ಆಳುವವರ ಅನುಗ್ರಹವನ್ನು ಹುಡುಕಿದಾಗ್ಯೂ ಮಾನವನ ನ್ಯಾಯವು ಕರ್ತನಿಂದ ಬರುವುದಾಗಿದೆ" (ಜ್ಞಾನೋಕ್ತಿಗಳು 29:26).

9) ದೇವರೇ ಎಲ್ಲವನ್ನೂ ನಿಯಂತ್ರಿಸುವವನಾಗಿದ್ದಾನೆ, ಹಾಗಾಗಿ ಭಯ ಮತ್ತು ಚಿಂತೆ ಬೇಡ!

"ರಾಜನ ಸಂಕಲ್ಪಗಳು ಯೆಹೋವನ ಕೈಯಲ್ಲಿ ನೀರಿನ ಕಾಲಿವೆಗಳಂತೆ ಇವೆ; ತನಗೆ ಬೇಕಾದ ಕಡೆಗೆ ತಿರುಗಿಸುತ್ತಾನೆ" (ಜ್ಞಾನೋಕ್ತಿಗಳು 21:1).

10) ನಿನ್ನ ಧಣಿ(ಬಾಸ್) ದುಷ್ಟನಲ್ಲದೆ ಪ್ರಾಮಾಣಿಕನಾಗಿರಲುಸಾಕು, ಮೇಲ್ಕಾಣಿಸಿದ ಎಲ್ಲಾ ಸೂತ್ರಗಳು ನಿಮಗೆ ಅನ್ವಯವಾಗುವುವು. ಹಾಗಿದ್ದೂ ನೀವು ಪ್ರಕಾಶಿಸುವುದಕ್ಕೆ ಅನುಕೂಲ ಸರಿತಾನೇ?

"**ಜಾಣನಾದ ಸೇವಕನಿಗೆ ರಾಜನ ಕೃಪೆ;** ಮಾನಗೇಡಿಗೆ ರಾಜನ ರೌದ್ರ" (ಜ್ಞಾನೋಕ್ತಿಗಳು 14:35).

"ಅರಸನ ಕ್ರೋಧವು ಸಿಂಹದ ಘರ್ಜನೆಯಂತಿರುವುದುದು, ಆದರೆ **ಆತನ ಅನುಗ್ರಹವು ಹಸಿರು ಹುಲ್ಲಿನ ಮೇಲೆ ಬೀಳುವ ಇಬ್ಬನಿಯಂತೆ**" (ಜ್ಞಾನೋಕ್ತಿಗಳು 19:12).

"ಹೃದಯ ಶುದ್ಧಿಯನ್ನಪೇಕ್ಷಿಸುವ ಸವಿಮಾತಾಡುವ ಮನುಷ್ಯನಿಗೆ **ರಾಜನ ಸ್ನೇಹವು ದೊರೆಯುವುದು**" (ಜ್ಞಾನೋಕ್ತಿಗಳು 22:11).

"ತನ್ನ ಕೆಲಸದಲ್ಲಿ ಚಟುವಟಿಕೆಯಾಗಿರುವವನನ್ನು ನೋಡು; ಇಂಥವನು ರಾಜರನ್ನು ಸೇವಿಸುವನಲ್ಲದೆ ನೀಚರನ್ನು ಸೇವಿಸುವುದಿಲ್ಲ" (ಜ್ಞಾನೋಕ್ತಿಗಳು 22:29).

11) ***ಅಂತಿಮವಾಗಿ –***

"ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು" (1ಪೇತ್ರ 2:12).

"ಕೆಟ್ಟತನಕ್ಕೆ ಸೋತುಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು" (ರೋಮಾಪುರದವರಿಗೆ 12:21).

"ಧರ್ಮಕ್ಕೆ ಆತುರಪಡುವವನಿಗೆ ದಯೆ; ಕೇಡನ್ನು ಹುಡುಕುವವನಿಗೆ ಕೇಡೇ" (ಜ್ಞಾನೋಕ್ತಿಗಳು 11:27).

• • • • • • • • • • • • •

ಈ ಹೊತ್ತೇ ಮಾಡು!

(ಲಘು ಧ್ಯಾನ)

"ನಾನು ಅಪೇಕ್ಷಿಸುವ ದಾರಿಯನ್ನು ಒಂದು ಸಾರಿ ದಾಟುತ್ತೇನೆ. ಒಂದು ವೇಳೆ ನಾನು ನನ್ನ ನೆರೆಯವನಿಗೆ ದಯೆಯನ್ನು ತೋರಿಸಲು ಅಥವಾ ಏನಾದರೂ ಒಳ್ಳೇದನ್ನು ಮಾಡಲು ಸಾಧ್ಯವಿರುವುದಾದರೆ ಈಗಲೇ ಮಾಡೋಣ ಮತ್ತು ಇದನ್ನು ಮಾಡಲು ನಿಧಾನಿಸುವುದಾಗಲೀ ಅಥವಾ ತಿರಸ್ಕರಿಸುವುದಾಗಲೀ ಬೇಡ. ಯಾಕಂದರೆ, ನಾನು ಮತ್ತೊಮ್ಮೆ ಈ ಮಾರ್ಗದಲ್ಲಿ ಹಾದು ಹೋಗಲು ಸಾಧ್ಯವಿಲ್ಲ" ಪೆನ್.

ಈ ಹೊತ್ತೇ ಇದನ್ನು ಮಾಡುವ ದಿವಸ. "ಎಷ್ಟು ಬಾರಿ ನಾವು ಒಬ್ಬ ಅಸ್ವಸ್ಥ ವ್ಯಕ್ತಿಗೆ ಒಂದು ಆದರಣೆಯ ಪತ್ರವನ್ನು ಕಳುಹಿಸಬೇಕೆಂದು ಯೋಚಿಸಿ ಆ ವ್ಯಕ್ತಿಯು ಸತ್ತು ಹೋದನೆಂಬದಾಗಿ ಕೇಳುವವರೆಗೂ ಕಳುಹಿಸದೇ ಬಿಟ್ಟಿದ್ದೇವೆ?" ಈ ಹೊತ್ತೇ ಒಳ್ಳೆಯದನ್ನು ಮಾಡಲು ಇರುವ ಅವಕಾಶದ ಗಳಿಗೆ. ಸ್ಯಾಮುವೇಲ್ ಜಾನ್‌ಸನ್ ಎಂಬುವವರು ಹೀಗೆ ಹೇಳಿದ್ದಾರೆ "ಒಂದು ಒಳ್ಳೆಯ ಕಾರ್ಯ ಮಾಡಲು ಒಂದು ಬಾರಿಗೆ ಸಮಯ ಕಾಯುವವನು, ಎಂದಿಗೂ ಏನನ್ನೂ ಮಾಡಲಾರನು". ಒಂದು ಲೋಟ ನೀರು ದೊಡ್ಡದೇನಲ್ಲದಿದ್ದರೂ, ಯೇಸು ಹೇಳಿದ್ದು "ನಿಜವಾಗಿಯೂ ನಾನು ನಿನಗೆ ಹೇಳುವುದೇನೆಂದರೆ, ಯಾರೂ ಅದರಿಂದ ಬರುವ ತನ್ನ ಪ್ರತಿಫಲವನ್ನು ಕಳೆದುಕೊಳ್ಳುವುದೇ ಇಲ್ಲ".

ಒಂದು ಒಳ್ಳೆಯ ಕಾರ್ಯವನ್ನು ಮಾಡಲು ಇರುವ ಗಳಿಗೆ ಈ ಹೊತ್ತೇ. ಪ್ರೇಕ್ಷಕನಿಗಾಗಿ ಕಾಯುವುದು ಬೇಡ. ಪ್ರತಿದಿನವೂ ಸೌಜನ್ಯದಿಂದ ತುಂಬಿದ ಸಣ್ಣಸಣ್ಣ ಕಾರ್ಯಗಳೇ ದೇವರನ್ನು ಮೆಚ್ಚಿಸುವಂತದ್ದಾಗಿದೆ. ರೋಗಿಗಳನ್ನು ಸಂದರ್ಶಿಸುವುದು, ಹಸಿದವರನ್ನು ಪೋಷಿಸುವುದು ಮತ್ತು ಬಡವರಿಗೆ ಬಟ್ಟೆ ತೊಡಿಸುವುದು. ಈ ಕಾರ್ಯಗಳನ್ನು ಮಾಡಲು ಯೇಸುವು ನೀತಿವಂತರಿಗೆ ಆಜ್ಞಾಪಿಸಿದ್ದಾನೆ. ಅವರು ಏನೇನು ಒಳ್ಳೇ ಕಾರ್ಯಗಳನ್ನು ತಮ್ಮಲ್ಲಿ ಹೀನಸ್ಥಿತಿಯಲ್ಲಿರುವ ಸಹೋದರನಿಗೆ ಮಾಡಿದರೋ, ಅವರು ಅವುಗಳನ್ನು ನನಗೇ ಮಾಡಿದಂತಾಯಿತು ಎಂದು ಯೇಸು ಅವರಿಗೆ ಹೇಳಿದಾಗ, ಅವರೆಲ್ಲರೂ ಆಶ್ಚರ್ಯಪಟ್ಟರು. ಯಾಕೋಬನು ಹೇಗೆ ಹೇಳಿದ್ದಾನೆ "ಶುದ್ಧ ಧರ್ಮವು ಯಾವುದೆಂದರೆ, ತಂದೆ ಇಲ್ಲದವರನ್ನು ಮತ್ತು ವಿಧವೆಯರನ್ನು ಅವರ ವೇದನೆಗಳಲ್ಲಿ ಸಂದರ್ಶಿಸಿ ಆದರಿಸುವದೂ ಮತ್ತು ಒಬ್ಬನು ತನಗೆ ಲೋಕದ ಮಲಿನತ್ವಗಳು ಅಂಟಿಕೊಳ್ಳದಂತೆ ಕಾಪಾಡಿಕೊಳ್ಳುವುದೂ ಆಗಿದೆ".

ಹೀಗೆ ಹೇಳಲ್ಪಟ್ಟಿದೆ, "ದೇವರಿಗಾಗಿ ನಾವು ಮಾಡಬಹುದಾದ ಒಂದೇ ನಿಜವಾದ ಕಾರ್ಯವೆಂದರೆ, ಆತನ ಇತರ ಮಕ್ಕಳೊಂದಿಗೆ ದಯೆಯುಳ್ಳವರಾಗಿ ಇರುವುದೇ ಆಗಿದೆ". ನಾವು ನಮ್ಮ ಸಹೋದರನನ್ನು ಪ್ರೀತಿಸದ ಹೊರತು, ದೇವರಿಗೆ ಪ್ರೀತಿ ತೋರಿಸುವುದು ಹೇಗಾದೀತು? ಯೋಹಾನನು ಹೀಗೆ ಹೇಳಿದ್ದಾನೆ– "ಒಬ್ಬ ಮನುಷ್ಯನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸುವುದಾದರೆ, ಆ ಮನುಷ್ಯನು

ಸುಳ್ಳುಗಾರನಾಗಿದ್ದಾನೆ. ಯಾಕಂದರೆ ತಾನು ನೋಡಿರುವ ತನ್ನ ಸಹೋದರನನ್ನೇ ತಾನು ಪ್ರೀತಿಸದೇ ಹೋದ ಮೇಲೆ, ತಾನು ನೋಡದೇ ಇರುವ ದೇವರನ್ನು ಪ್ರೀತಿಸಲು ಹೇಗಾದೀತು?'' ಈ ರೀತಿ ದೇವರಿಂದ ನಾವು ಹೊಂದಿದ ಆಜ್ಞೆಯು ''ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನೂ ಸಹ ಪ್ರೀತಿಸುತ್ತಾನೆ'' ಎಂಬದೇ.

ನಂಬಿಕೆಯ ಹಾಗೆ ಪ್ರೀತಿಯು ಸಹ ಕಾರ್ಯಗಳಿಂದ ಮಾತ್ರವೇ ತೋರಿಸುವಂತದ್ದಾಗಿದೆ. ನಾವು ಮರೆಯುತ್ತಿರುವ ಒಬ್ಬರನ್ನು ಪ್ರೀತಿಸುತ್ತಿದ್ದೇವೆ ಎಂದು ತೋರಿಸುವುದು ಕಷ್ಟಕರವಾದ ಸಂಗತಿ. ಯಾಕೋಬನು ಹೀಗೆ ಹೇಳಿದ್ದಾನೆ– ''ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೆ ಇರುವಾಗ ನಿಮ್ಮಲ್ಲಿ ಒಬ್ಬನು ಆವರಿಗೆ ದೇಹಕ್ಕೆ ಬೇಕಾದದ್ದನ್ನು ಕೊಡದೆ ಸಮಾಧಾನದಿಂದ ಹೋಗಿರಿ, ಬೆಂಕಿ ಕಾಯಿಸಿಕೊಳ್ಳಿರಿ, ಹೊಟ್ಟೆ ತುಂಬಿಸಿಕೊಳ್ಳಿರಿ ಎಂದು ಬರೀ ಮಾತಿನಿಂದ ಹೇಳಿದರೆ ಪ್ರಯೋಜನವೇನು?'' ನಿಜ ಪ್ರೀತಿಯು ಅವಶ್ಯಕತೆಯುಳ್ಳವರಿಗೆ ಬಟ್ಟೆ ತೊಡಿಸುವದರಲ್ಲಿಯೂ ಮತ್ತು ಪೋಷಿಸುವುದರಲ್ಲಿಯೂ ನಿರತವಾಗಿರುತ್ತದೆ. ಅವರಿಗೆ ಇದರ ಬಗ್ಗೆ ಮಾತನಾಡುವುದಕ್ಕೂ ಸಮಯವಿರುವುದಿಲ್ಲ.

ಇದು ಯಾರು ಅತ್ಯುತ್ತಮವಾಗಿ ಮಾತನಾಡುವವರು ಎಂಬುದಾಗಿ ಅಲ್ಲ. ಆದರೆ ಯಾರು ಮಾಡುವವರು ಎಂಬುದಾಗಿಯೇ ಆಗಿದೆ. ಒಂದು ಹಳೇ ಮಾತು ಹೀಗಿದೆ– ''ಕಾರ್ಯಗಳು ಪದಗಳಿಗಿಂತಲೂ ದೊಡ್ಡ ಶಬ್ದದಿಂದ ಮಾತನಾಡುತ್ತವೆ''. ಫರಿಸಾಯರು ತಮ್ಮ ಉದ್ದವಾದ ನಿಲುವಂಗಿಗಳನ್ನು ತೊಟ್ಟು ತಿರುಗಾಡುವುದರಲ್ಲಿಯೇ ನಿರತವಾಗಿರುವಲ್ಲಿ, ಒಬ್ಬ ಬಡ ವಿಧವೆಯು ತನ್ನ ಎರಡು ನಾಣ್ಯಗಳನ್ನು ಕಾಣಿಕೆಯ ಭಂಡಾರಕ್ಕೆ ಹಾಕಿಬಿಟ್ಟಳು. ಒಬ್ಬ ಪಾಪಿಯು ಯೇಸುವಿನ ಪಾದಗಳನ್ನು ಮುಟ್ಟಲು, ಪಾಪಿಯ ಕೈಯಿಂದ ಮುಟ್ಟಿಸಿಕೊಂಡನೆಂಬ ಕಾರಣದಿಂದ ಸೀಮೋನನು ಹಿಂದೆ ಕೂತುಕೊಂಡು ಯೇಸುವನ್ನು ಖಂಡಿಸಿದನು. ಆದರೆ, ಪಾಪಿಯಾಗಿ ಬಂದಿದ್ದ ಆ ಮರಿಯಳು ಯೇಸುವಿನ ಪಾದಗಳನ್ನು ಬೆಲೆಯುಳ್ಳ ಸುಗಂಧ ತೈಲದಿಂದ ಅಭಿಷೇಕಿಸಿದಳು ಮತ್ತು ಆತನ ಪಾದಗಳಿಗೆ ಮುದ್ದಿಟ್ಟು ತನ್ನ ಕೂದಲಿನಿಂದ ಒರೆಸಿದಳು.

ನಾವು ನೋಡಲು ವಿಧವೆಯಾಗಲೀ, ಮರಿಯಳಾಗಲೀ ಬಹಳ ದೊಡ್ಡದ್ದೇನನ್ನೂ ಮಾಡಿಲ್ಲವೆನಿಸಿದರೂ, ಅವರು ತಾವು ಏನನ್ನು ಮಾಡಲು ಸಾಧ್ಯವೋ ಅದನ್ನೇ ಮಾಡಿದರು. ಎರಡು ನಾಣ್ಯಗಳು ದೊಡ್ಡದೇನಲ್ಲ, ಆದರೆ ಆ ಎರಡು ನಾಣ್ಯಗಳೇ ಆ ಬಡ ವಿಧವೆಗೆ ಜೀವನಾಧಾರವಾಗಿದ್ದವು. ಮರಿಯಳು ಮಾಡಿದ್ದು ಒಂದು ಸರಳವಾದ ಪ್ರೀತಿಯ ಕೃತ್ಯವಾಗಿತ್ತು, ಆದರೆ ಆ ಇಬ್ಬರೂ ತಾವು ಏನನ್ನು ಮಾಡಬಹುದಾಗಿತ್ತೋ, ಅದನ್ನೇ ಮಾಡಿದರು. ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ, ನಾವು? ನಾವು ಸಣ್ಣ ಕಾರ್ಯಗಳನ್ನು ತಿರಸ್ಕರಿಸಿ ದೊಡ್ಡ ಅವಕಾಶಕ್ಕಾಗಿ ಕಾಯುತ್ತಿದ್ದೇವೋ? ನಾವು ನಮ್ಮಲ್ಲಿರುವ ಸಣ್ಣ ಬೆಲೆಯ ನಾಣ್ಯಗಳನ್ನು ಹಿಡಿದುಕೊಂಡು ದೊಡ್ಡ ಬೆಲೆಯ ಹಣವು ಸಿಕ್ಕಿದ ಮೇಲೆ ಕೊಡಲು ಕಾಯುತ್ತಿದ್ದೇವೋ? ನಾವು ಏನೋ ದೊಡ್ಡ ಒಳ್ಳೆಯದನ್ನು ಮಾಡಲು ಕಾಯುತ್ತಾ ಏನನ್ನೂ ಮಾಡದೇ ಇದ್ದೇವೋ?

ಈ ದಿನಕ್ಕಿಂತ ಮುಂಚೆಯಾಗಿ ಪ್ರಾರಂಭಿಸಲು ಸಾಧ್ಯವಿಲ್ಲ, ಆದರೆ ನಾವು ಈ ದಿನಕ್ಕಿಂತ ತಡವಾಗಿ ಪ್ರಾರಂಭಿಸುವುದು ಬೇಡ. ***ಕೊನೆಯದಾಗಿ,*** ನಾವು ಈ ದಿನವನ್ನು ಕಳೆದುಕೊಂಡ ಮೇಲೆ ಮತ್ತೊಮ್ಮೆ ಹಾದು ಹೋಗಲು ಸಾಧ್ಯವೇ ಇಲ್ಲ. ಒಂದು ವೇಳೆ ನಾವು ದಯೆ ತೋರಿಸುವಂತಾದ್ದು ಇರುವುದಾದರೆ ಅಥವಾ ಏನಾದರೂ ಒಳ್ಳೆಯದನ್ನು ಮಾಡುವಂತದ್ದು ಇರುವುದಾದರೆ, ***ಈ ಹೊತ್ತೇ ಮಾಡೋಣ.***

• • • • • • • • • • • • •

ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು

ಯೇಸು ಮತ್ತು ಆತನ ಶಿಷ್ಯರು ತಮ್ಮ ದಿನನಿತ್ಯದ ಕಾರ್ಯದ ನಿಮಿತ್ತ ಸ್ವಲ್ಪ ವಿಶ್ರಾಂತಿ ಪಡೆಯಲು ಬೆಟ್ಟಕ್ಕೆ ಹೋದಂತಹ ಸಂದರ್ಭದಲ್ಲಿ, ಯೇಸುಕ್ರಿಸ್ತ ಅಲ್ಲಿ ಐದು ಸಾವಿರ ಜನರಿಗೆ ಊಟ ದಯಪಾಲಿಸಿ ಅದ್ಭುತ ಕಾರ್ಯ ಮಾಡಿದ್ದಾನೆ.

ಯೇಸು ಮಾಡಿದ ಅದ್ಭುತ ಕಾರ್ಯಗಳನ್ನು ನೋಡುತ್ತಾ ಬಹುಜನರ ಗುಂಪು ದಿನವೆಲ್ಲಾ ಆತನನ್ನು ಹಿಂಬಾಲಿಸುತ್ತಿದ್ದರು. ಯಾಕಂದರೆ ಯೇಸು ಮಾಡುವ ಅದ್ಭುತ ಕಾರ್ಯಗಳಿಂದ ಅವರು ಅತ್ಯಂತ ಆಕರ್ಷಣೆಗೆ ಒಳಗಾಗಿದ್ದರು. ಜನರು ಇಂತಹ ಅದ್ಭುತ ಕಾರ್ಯಗಳನ್ನು ಮೊದಲು ಎಂದೂ ಅವರು ನೋಡಿರಲಿಲ್ಲ. ಈ ಸಂಗತಿಯನ್ನು ಕುರಿತು ನೀವು ಯೋಹಾನನ ಸುವಾರ್ತೆಯ ಅಧ್ಯಾಯ 6:5–14 ವಚನಗಳಲ್ಲಿ ಮತ್ತು ಇತರೆ ಮೂರು ಸುವಾರ್ತೆಗಳಲ್ಲಿ ನೋಡಬಹುದು. ಈ ಅದ್ಭುತ ಕಾರ್ಯವು ಬಹಳ ಪ್ರಾಮುಖ್ಯವಾಗಿ ಇರುವುದರಿಂದ ದೈವ ಪ್ರೇರಣೆಯಿಂದ ಪ್ರೇರಿತವಾಗಿರುವ ನಾಲ್ಕು ಲಿಖಿತ ದಾಖಲೆಗಳಲ್ಲಿ ಇದರ ವೈಶಿಷ್ಟತೆ ಕಂಡು ಬರುತ್ತದೆ.

ಜವೆಗೋದಿ ರೊಟ್ಟಿಗಳು ಮತ್ತು ಮೀನುಗಳು :–

ಜನರ ಗುಂಪು ಇಡೀ ದಿನವೆಲ್ಲಾ ಆತನನ್ನು ಹಿಂಬಾಲಿಸುತ್ತಿದ್ದರು. ಆಗ ಅವರು ಹಸಿದಿದ್ದರು, ಯೇಸು ಅವರಿಗೆ ಊಟವನ್ನು ಒದಗಿಸಲು ನಿರ್ಧರಿಸಿದನು. ಆತನು ಫಿಲಿಪ್ಪನಿಗೆ ಇದು ನೆರವೇರುವ ಕುರಿತು ಹೇಗೆ ಆಲೋಚಿಸುತ್ತಾನೆಂದು ತಿಳಿದುಕೊಳ್ಳಲು ಇವರ ಊಟಕ್ಕೆ ನಾವು ಎಲ್ಲಿಂದ ರೊಟ್ಟಿ ಕೊಂಡು ತರೋಣ? (ಯೋಹಾನ 6:5) ಎಂದು ಕೇಳಿದನು. ಅದಕ್ಕೆ ಫಿಲಿಪ್ಪನು ಇದು ಪರೀಕ್ಷೆ ಎಂದು ತಿಳಿದುಕೊಳ್ಳದೆ, ಈ ಗುಂಪಿಗೆ ಊಟ ಮಾಡಿಸಲು ತುಂಬಾ ಹಣ ಬೇಕಾಗಬಹುದು ಎಂದು ಯೋಚಿಸಿದನು ಮತ್ತು ಒಂದು ವೇಳೆ ಹಣ ದೊರೆತರೂ ಮತ್ತು ಅವಶ್ಯವಾದ ಊಟ ದೊರೆತರೂ ಇವರೆಲ್ಲರಿಗೆ ಸರಬರಾಜು ಮಾಡುವುದು ದೊಡ್ಡ ಕಾರ್ಯವು, ಮತ್ತು ಬಹಳ ಖರ್ಚುಳ್ಳದ್ದಾಗಿದೆ, ಕನಿಷ್ಠ 200 ದಿನಾರ(ಪಾವಲಿ) ಹಣದ

ರೊಟ್ಟಿಯಾದರೂ ಬೇಕೆಂದು ಸಲಹೆ ಮಾಡಿದನು. ಅವರ ಗುಂಪಿಗೆ ಸೇರಿದ ಹಣದ ಚೀಲದಲ್ಲಿ ಇಷ್ಟೊಂದು ಹಣವಿಲ್ಲವೆಂದು ಆತನು ತಿಳಿದುಕೊಂಡಿದ್ದನು. ಒಂದು ದಿನಾರ(ಪಾವಲಿ) ಹಣ ಒಂದು ದಿನದ ಕೂಲಿ ಕೆಲಸಕ್ಕಾಗಿ ಅಂದು ಕೊಡಲ್ಪಡುತ್ತಿತ್ತು(ಮತ್ತಾಯ 20:2ರಲ್ಲಿ ನೋಡಿ). ಇಂದಿನ ದಿನಗಳಲ್ಲಿ ದಿನದ ಕೆಲಸಕ್ಕಾಗಿ ಜನರು ಎಷ್ಟು ಕೂಲಿ ಹಣ ಪಡೆದುಕೊಳ್ಳುತ್ತಿದ್ದಾರೆ ಎಂದು ನಾವು ತಿಳಿದುಕೊಳ್ಳುವುದಾದರೆ ಅದರ ಬೆಲೆಯು ಬಹಳವಾಗಿರುತ್ತದೆ ಎಂಬುದು ನಮಗೆ ತಿಳಿದುಬರುತ್ತದೆ. ಅಂದ್ರೆಯನು ಯೇಸುವಿಗೆ ಒಬ್ಬ ಹುಡುಗನು ಎರಡು ಚಿಕ್ಕ ಮೀನುಗಳು ಮತ್ತು ಐದು ಜವೆಗೋದಿ ರೊಟ್ಟಿಗಳನ್ನು ತನ್ನೊಂದಿಗೆ ತೆಗೆದುಕೊಂಡು ಬಂದಿದ್ದಾನೆಂದು ಹೇಳಿದನು. ಅದಕ್ಕೆ ಅವನು ತುಂಬಾ ದೂರ ಹೋಗಬೇಕಾಗಿಲ್ಲವೆಂದು ಕಂಡುಕೊಂಡನು, ಆದರೆ ನಾವು ಯೇಸುಕ್ರಿಸ್ತನಿಗೆ ಬಹಳಷ್ಟು ಕೊಟ್ಟರೂ ಅಥವಾ ಸ್ವಲ್ಪವಾಗಿ ಕೊಟ್ಟರೂ ಅದರ ಮುಖಾಂತರ ಇಲ್ಲಿ ಸಂಭವಿಸದ ಹಾಗೆಂಯೇ ಆತನು ಕಾರ್ಯ ಮಾಡಬಲ್ಲನು. ಯೇಸು ಆಗ ಜನಸಮುದಾಯಕ್ಕೆ ತಿನ್ನುವುದನ್ನು ಪಡಕೊಳ್ಳಲು ಸಿದ್ಧರಾಗಿ ಹುಲ್ಲಿನ ಮೆಲೆ ಕುಳಿತುಕೊಳ್ಳುವಂತೆ ಸೂಚನೆ ನೀಡಿದನು.

ಜನರು ಪಂಕ್ತಿಗೆ ನೂರರಂತೆ, ಐವತ್ತರಂತೆ(ಮಾರ್ಕ 6:40) ಸಾಲು ಸಾಲಾಗಿ ಕುಳಿತುಕೊಳ್ಳುವಂತೆ ಯೇಸು ಆಜ್ಞಾಪಿಸಿದನು. ಮಾರ್ಕನು ಸಹ ಈ ಘಟನೆಯನ್ನು ಕುರಿತು ವರ್ಣಿಸಿದ್ದಾನೆ. ಈ ರೀತಿಯಾಗಿ ಸಾಲುಸಾಲಾಗಿ ಕುಳಿತುಕೊಳ್ಳುವುದರಿಂದ ಶಿಷ್ಯರು ಎಲ್ಲಾ ಕಡೆಯಲ್ಲಿ ಊಟ ಹಂಚಲು ಅನುಕೂಲವಾಗುತ್ತದೆ. ಆ ಮೇಲೆ ಯೇಸು ರೊಟ್ಟಿಗಳನ್ನು ತೆಗೆದುಕೊಂಡು ಸ್ತೋತ್ರಮಾಡಿ ಶಿಷ್ಯರಿಗೆ ಹಂಚಿದನು, ಅವರು ಕುಳಿತಿರುವ ಜನರಿಗೆ ಹಂಚಿಕೊಟ್ಟರು, ಅದರಂತೆ ಮೀನುಗಳನ್ನೂ ಸಹ ಅವರಿಗೆ ಬೇಕಾದಷ್ಟು ಹಂಚಿದರು (ಯಾಹಾನ6:11).

ಅದ್ಭುತ ಕಾರ್ಯವನ್ನು ಕುರಿತು ಪರ್ಯಾಲೋಚನೆ :–

ಈ ಕಾರ್ಯವು ಅತ್ಯಾಶ್ಚರ್ಯವುಳ್ಳ ಅದ್ಭುತವಾಗಿದೆ, ಯೇಸು ಕೇವಲ ಆಹಾರವನ್ನು ಉಂಟು ಮಾಡುವ ಸಾಮರ್ಥ್ಯ ಹೊಂದಿರಲಿಲ್ಲ, ಆದರೆ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಹೆಚ್ಚಿನ ಪ್ರಮಾಣದಲ್ಲಿ ಆಹಾರ ಬಹಳ

ಬೇಕಾಗಿತ್ತು, ಅಂದಾಜಿನಂತೆ ಪ್ರತಿಯೊಬ್ಬ ವ್ಯಕ್ತಿ ಸರಾಸರಿ 4ಔನ್ಸ್ ತೂಕದಷ್ಟು (1ಔನ್ಸ್–ಪೌಂಡಿನ 16ನೇ 1ಭಾಗ). ಅಂದು ಜನರು ಊಟ ಮಾಡಿ ಹೆಚ್ಚಾಗಿದ್ದು 1100 ತೂಕದಷ್ಟಿತ್ತು. ಇದು ಬಹುದೊಡ್ಡ ಪ್ರಮಾಣದಾಗಿತ್ತು ಮತ್ತು ಈ ಕಾರ್ಯದ ಮಹತ್ವ ಪ್ರತಿಯೊಬ್ಬ ಶಿಷ್ಯರು 400 ಜನರಿಗೆ ಊಟ ಬಡಿಸಬೇಕಾಗಿತ್ತು ಮತ್ತು ಈ ಕಾರ್ಯ ಮಹತ್ವದ ಸಮಯ ತೆಗೆದು ಕೊಳ್ಳುವಂತಹದು ಆಗಿತ್ತು. ಇದು ಒಂದು ದೊಡ್ಡ ಸಾಹಸ ಕಾರ್ಯವಾಗಿದೆ ಮತ್ತು ಹಸಿದವರಿಗೆ ತೃಪ್ತಿ ಮತ್ತು ಅವರಿಗೆ ಅವರ ಅವಶ್ಯಕತೆಯನ್ನು ಪೂರೈಸುವ ಕಾರ್ಯವಾಗಿದೆ. ಗಮನಿಸಿರಿ, ಯೇಸು ಮೊದಲು ದೇವರಿಗೆ ಸ್ತೋತ್ರವನ್ನು ಸಲ್ಲಿಸಿದನು. ಯೇಸುವಿನ ಈ ಉದಾಹರಣೆ ಆತನು ನಿಜವಾಗಿಯೂ ಅದ್ಭುತಕಾರ್ಯವನ್ನು ಮಾಡುವುದಕ್ಕಿಂತ ಮೊದಲು ದೇವರಿಗೆ ವಂದನೆಗಳನ್ನು ಸಲ್ಲಿಸಿದನು. ನಾವು ಸಹ ನಮ್ಮ ಮನೆಗಳಲ್ಲಿ ಊಟವನ್ನು ಹಂಚುವಾಗ ಈ ರೀತಿಯಾಗಿ ಮಾಡುವುದು ಒಳ್ಳೆಯದು.

ನಾವು ಜೀವಂತವಾಗಿರಲು ಆಹಾರವನ್ನು ಒದಗಿಸುವವನು ಅಂತಿಮವಾಗಿ ದೇವರೇ ಆಗಿದ್ದಾನೆ. ಇನ್ನೊಂದು ಉದಾಹರಣೆ ಆತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು–ಮಿಕ್ಕ ತುಂಡುಗಳನ್ನು ಕೂಡಿಸಿರಿ, ಇದರಲ್ಲಿ ಯಾವುದೂ ವ್ಯರ್ಥವಾಗಬಾರದು. ಆದುದರಿಂದ ಅವರು ಅದನ್ನು ಕೂಡಿಸಿದರು, ಆ ಐದು ಜವೆಗೋದಿಯ ರೊಟ್ಟಿಗಳಲ್ಲಿ ಜನರು ತಿಂದು ಮಿಕ್ಕ ತುಂಡುಗಳಿಂದ ಹನ್ನೆರಡು ಪುಟ್ಟಿ ತುಂಬಿದ್ದವು(ವಚನ13). ಈ ಮಿಕ್ಕ ತುಂಡುಗಳು ನಂತರದಲ್ಲಿ ಪ್ರಾಣಿಗಳಿಗೂ ತಿನ್ನಲು ಕೊಡುವುದರ ಮುಖಾಂತರ ಅವುಗಳು ಸಹ ಈ ಅದ್ಭುತ ಕಾರ್ಯದಲ್ಲಿ ಪಾಲು ತೆಗೆದುಕೊಳ್ಳುವಂತೆ ಮಾಡಿದರು.

ಪ್ರವಾದಿಯಾದ ಯೇಸು :–

ಸತ್ಯವೇದದ ಈ ಪ್ರವಾದನೆಗಳು ನೆರವೇರುತ್ತಿರುವಂತೆ ಜನರು ಅದ್ಭುತಗಳನ್ನು ನೋಡಿದರು ಲೋಕಕ್ಕೆ ಬರಬೇಕಾದ ಪ್ರವಾದಿ ಈತನೇ ನಿಜ ಎಂದು ಹೇಳಿದರು(ವ–14). ಮೋಶೆ ಬರೆದಿರುವುದನ್ನು ಅವರು ಸಂಶಯಪಡದೆ ಜ್ಞಾಪಿಸಿಕೊಂಡರು. "ನಾನು(ದೇವರು) ಇವರ ಸ್ವದೇಶದಲ್ಲಿ ನಿನ್ನಂಥಹ(ಮೋಶೆ) ಪ್ರವಾದಿಯನ್ನು ಎಬ್ಬಿಸುವೆನು, ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು, ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವುದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು"(ಧರ್ಮೋಪದೇಶಕಾಂಡ 18:18–19).

ಈ ಅಸಾಧಾರಣವಾದ ಅದ್ಭುತಕಾರ್ಯದಲ್ಲಿ ಅವರು ಸಹ ಭಾಗಿಗಳಾಗಿದ್ದು ಆಳವಾದ ಪ್ರಭಾವಕ್ಕೆ ಒಳಗಾಗಿದ್ದರು. ಬಹಳ ಪ್ರಾಮುಖ್ಯತೆವುಳ್ಳವನು, ದೇವರ ಮಾತುಗಳನ್ನಾಡುವವನು ಪ್ರವಾದಿಯ, ಪ್ರಸನ್ನತೆಯಲ್ಲಿ ನಾವೆಲ್ಲರೂ ಇದ್ದೇವೆ ಎಂದು ಅವರಿಗೆ ಅನುಭವವಾಯಿತು. ಆತನು ಹೇಳುವುದನ್ನು ಗಮನವಿಟ್ಟು ಕೇಳಿ ಅದರ ಕುರಿತು ಟಿಪ್ಪಣಿಗಳನ್ನು ಬರೆದುಕೊಂಡರು, ನಿಜ ಜೀವನದಲ್ಲಿ ಅಭ್ಯಾಸ ಮಾಡುವುದು ಅವರ ಕರ್ತವ್ಯವಾಗಿತ್ತು ಆದಾಗ್ಯೂ ಯೆಹೂದ್ಯರ ಕಾಲದಲ್ಲಿ ನಡೆದಿರುವ ಈ ಸಂಗತಿ ಇಂದಿನ ಅಂತ್ಯ ದಿನಗಳಲ್ಲಿ ನಮ್ಮೆಲ್ಲರಿಗೆ ಸಮಾನವಾಗಿ ಅನ್ವಯಿಸುವಂಥದ್ದಾಗಿದೆ.

ಇಬ್ರಿಯರಿಗೆ ಬರೆದ ಬರಹಗಾರನು ತುಂಬಾ ಘನತೆಯಿಂದ ಹೀಗೆ ಹೇಳಿದ್ದಾನೆ – "ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತನಾಡಿದ್ದಾನೆ ಈತನನ್ನು ಎಲ್ಲಾದಕ್ಕೂ ಬಾಧ್ಯಸ್ತನನ್ನಾಗಿ ನೇಮಿಸಿದನು" (ಇಬ್ರಿಯರಿಗೆ 1:1–2).

ಅರಸನಾದ ಯೇಸು :–

ಜನರು ಯೇಸುವನ್ನು ರಾಜನನ್ನಾಗಿ ಮಾಡಬೇಕೆಂದು ಆಲೋಚಿಸಿರುವುದು ಆಶ್ಚರ್ಯದ ಸಂಗತಿಯಲ್ಲ(ಮತ್ತು ಶಿಷ್ಯರು ಆತನಿಗೆ ಬೆಂಬಲವಾಗಿದ್ದುದರಲ್ಲಿ ಸಂಶಯವಿಲ್ಲ). ಈ ಅಧಿಕಾರವನ್ನು ಸ್ವೀಕರಿಸಲು ಆತನನ್ನು ಮನವೊಲಿಸಬೇಕಾಗಿತ್ತು. ಅದ್ಭುತವಾದ ಅಧಿಕಾರವನ್ನು ಹೊಂದಿರುವದನ್ನು ನೋಡಿದ್ದರು, ಆತನ ಸುತ್ತಲು ಯಾವಾಗಲೂ ಇದ್ದುಕೊಂಡು ಆತನನ್ನು ಬೆಂಬಲಿಸಿ ಆತನು ಆಜ್ಞಾಪಿಸಿದ್ದನ್ನೆಲ್ಲಾ ಮಾಡುವವರಾಗಿದ್ದರು.

ಆತನು ಅವರಿಗೆ ಪ್ರತಿದಿನ ಕೊರತೆ ಇರದ ಹಾಗೆಯೇ ಪೋಷಿಸುತ್ತಿದ್ದನು, ಯೇಸು ತನಗೆ ಬಂದಿರುವ ಶೋಧನೆಯನ್ನು ವಿರೋಧಿಸಿ, ಎದುರಿಸಿ ಜಯಿಸಿದನು. ಆತನು ಯಾವಾಗ ಈ ಭೂಲೋಕದ ರಾಜನಾಗುವನೋ ಆಗ ಅಧಿಕಾರದ ಸಮಯ ಬರುತ್ತದೆ. ಆದರೆ ಇನ್ನೂ ಬಂದಿಲ್ಲ ಅಂಥಹ ಅಧಿಕಾರ ಆತನಿಗೆ ಈ ಸಂದರ್ಭದಲ್ಲಿ ಅಸಂಬದ್ಧವಾಗಿದೆ. ದೇವರು ಬಿಡುಗಡೆಯ ಕಾರ್ಯಮಾಡಿ ಮುಗಿಸಲು ಈಗಾಗಲೇ ಆತನಿಗೆ ಸೂಚನೆಯನ್ನು ಕೊಟ್ಟಿದ್ದಾನೆ. ಕಿರೀಟಕ್ಕಿಂತಲೂ ಮೊದಲು ಶಿಲುಬೆ ಮರಣ ಬರಬೇಕಾಗಿತ್ತು. ಯೇಸು ಅವರ ಮಧ್ಯದಿಂತ ಕಣ್ಮರೆಯಾಗಲಿದ್ದನು, ಆತನು ತನ್ನ ಶಿಷ್ಯರನ್ನು ದೋಣಿಯಲ್ಲಿ ಕಳುಹಿಸಿ ತಂದೆಯಾದ ದೇವರೊಂದಿಗೆ ಸಂಭಾಷಿಸುವದಕ್ಕಾಗಿ, ಪ್ರಾರ್ಥಿಸುವುದಕ್ಕಾಗಿ, ಮತ್ತು ಆತನ ಪ್ರೋತ್ಸಾಹ, ಮಾರ್ಗದರ್ಶನ ಪಡೆಯಲು ಬೆಟ್ಟದಲ್ಲಿ ಏಕಾಂತವಾಗಿರುವ ಸ್ಥಳಕ್ಕೆ ಹಿಂದಿರುಗಿದನು.

ಈ ಕಾರ್ಯದಿಂದ ಯೇಸು ಎಲ್ಲಾ ಸಮಯಗಳಲ್ಲಿ ಮಾರ್ಗದರ್ಶನ ಹೊಂದುವುದಕ್ಕಾಗಿ ಪರಲೋಕದ ತಂದೆಯೊಂದಿಗೆ ಎಷ್ಟು ಹತ್ತಿರವಾಗಿದ್ದನು ಎಂಬುದು ಆತನು ತೋರಿಸಿಕೊಟ್ಟಿದ್ದಾನೆ. ಇದು ಕೂಡ ಯೇಸುವಿನ ಜೀವಿತದ ಇನ್ನೊಂದು ಉದಾಹರಣೆಯಾಗಿದೆ, ಇದನ್ನು ನಾವು ನಮ್ಮ ನಿಜ ಜೀವನದಲ್ಲಿ ಅನುಸರಿಸಬೇಕಾಗಿದೆ.

• • • • • • • • • • • • •

ಬಿತ್ತುವವನ ಸಾಮ್ಯ

ಯೇಸುಕ್ರಿಸ್ತನ ಸಾಮ್ಯಗಳು

(ಮತ್ತಾಯ 13:1–9, 18–23 ಮಾರ್ಕ 4:1–9, 13–20 ಲೂಕ 8:4–8, 11–15)

ನಮ್ಮ ರಕ್ಷನಾದ ಯೇಸುಕ್ರಿಸ್ತನು ಪರ್ವತ ಪ್ರಸಂಗದಲ್ಲಿ ದೇವರ ರಾಜ್ಯವನ್ನು ಎದುರುನೋಡುತ್ತಿರುವವರಿಗೆ ಮತ್ತಾಯ ಅಧ್ಯಾಯ 5, 6 ಮತ್ತು 7ರಲ್ಲಿ ವಿಶೇಷವಾದ ತಿಳುವಳಿಕೆಯನ್ನು ಕೊಟ್ಟಿದ್ದು ಅದರಂತೆ ನಡೆಯಬೇಕೆಂದು ತಿಳಿಸಿರುತ್ತಾನೆ. ಅದರಂತೆ ನಾವು ದೇವರ ರಾಜ್ಯದ ಬಾಧ್ಯತೆಯನ್ನು ಹೊಂದಬೇಕಾದರೆ ದೇವರು ತನ್ನ ಮಗನ ಮೂಲಕ ಕೊಟ್ಟಿರುವ ವಾಕ್ಯಗಳನ್ನು ಸಿದ್ಧಮನಸ್ಸಿನಿಂದ ಅಂಗೀಕರಿಸಿ, ನಂಬಿ ಅವುಗಳನ್ನು ನಮ್ಮ ಜೀವಿತದಲ್ಲಿ ಅನುಷ್ಠಾನ ಗೊಳಿಸುವುದೇ ಮುಖ್ಯ ಉದ್ದೇಶವಾಗಿದೆ.

ಯೇಸುಕ್ರಿಸ್ತನು ತನ್ನ ಸೇವಾವಧಿಯಲ್ಲಿ ಶಿಷ್ಯರಿಗೆ, ಯೆಹೂದ್ಯರಿಗೆ ಮತ್ತು ಅನ್ಯಜನರಿಗೂ ಅನ್ವಯಿಸುವಂತೆ ಅನೇಕ ದೈವೀಕ ವಿಷಯಗಳನ್ನು ತಿಳಿಸಿರುತ್ತಾನೆ. ಅವುಗಳನ್ನು ನಾವು ಓದಿ, ಸತ್ಯಕ್ಕೆ ತಕ್ಕಂತೆ ಅರ್ಥಯಿಸಿಕೊಂಡು ಅಳವಡಿಸಿಕೊಳ್ಳಲು ಬಹಳ ಸುಲಭವಾಗಿ ಗ್ರಹಿಸುವ ರೀತಿಯಲ್ಲಿ ಬೋಧನೆ ಮಾಡಿರುತ್ತಾನೆ. ಜನರು ಆತನ ಉದ್ದೇಶವನ್ನು ಸರಿಯಾಗಿ ಅರಿಯದೆ ಆತನ ಅದ್ಭುತ ಕಾರ್ಯಗಳ ವಿಷಯದಲ್ಲಿಯೂ, ದೇವರ ರಾಜ್ಯದ ವಿಷಯದಲ್ಲಿಯೂ ಬಹು ತಪ್ಪಾದ ಅಭಿಪ್ರಾಯಗಳಿಂದ ಕೂಡಿದವರಾಗಿದ್ದಾರೆ. ಆದರೆ ದೇವರ ರಾಜ್ಯದ ವಿಷಯವನ್ನು, ಅದರ ಉದ್ದೇಶವನ್ನು ಸರಿಯಾಗಿ ಗ್ರಹಿಸಿಕೊಳ್ಳುವಂತೆಯೂ ಮತ್ತು ದೇವರು ನಮ್ಮನ್ನು ತನ್ನ ಗಣನೆಯಲ್ಲಿ ನೀತಿವಂತರೆಂದು ಪರಿಗಣಿಸಬೇಕಾದರೆ ಯೇಸುಕ್ರಿಸ್ತನು ತೋರಿಸಿರುವ ಬೆಳಕಿನ ಮಾರ್ಗದಲ್ಲಿ ನಡೆಯುವವರಾಗಬೇಕು.

ಮತ್ತಾಯ, ಮಾರ್ಕ ಮತ್ತು ಲೂಕ ಈ ಸುವಾರ್ತೆಗಳಲ್ಲಿ ಬಿತ್ತುವವನ ಸಾಮ್ಯವನ್ನು ಜನರಿಗೆ ಸಾಮ್ಯರೂಪದಲ್ಲಿ ತಿಳಿಸಿದ್ದಾನೆ. ಮೊದಲನೆಯದಾಗಿ ಬಿತ್ತುವವನ ಸಾಮ್ಯದಲ್ಲಿ ವಿಶೇಷವಾದ ಆತ್ಮೀಕ ಅರ್ಥವು ಒಳಗೊಂಡಿದೆ. ಈ ಸಾಮ್ಯದಲ್ಲಿ ನಾಲ್ಕು(4) ಗುಂಪುಗಳನ್ನು ತಿಳಿಸಿದೆ.

1) ದಾರಿಯ ಮಗ್ಗುಲಲ್ಲಿ ಬಿದ್ದವು
2) ಬಹಳ ಮಣ್ಣಿಲ್ಲದ ಬಂಡೆಯ ನೆಲ
3) ಮುಳ್ಳುಗಿಡಗಳು ಮತ್ತು,
4) ಒಳ್ಳೆಯನೆಲ.

ಇವುಗಳ ಅರ್ಥವನ್ನು ಶಿಷ್ಯರಿಗೆ ಪ್ರತೇಕವಾಗಿ ಯೇಸು ತಿಳಿಸಿದ್ದಾನೆ, ಯಾಕಂದರೆ ಪರಲೋಕ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೆ ಕೊಟ್ಟಿದೆ(ವಚನ11). ಮತ್ತಾಯ 13:18–23ರಲ್ಲಿ ಸಾಮ್ಯದ ಅರ್ಥವನ್ನು ಯೇಸು ತಿಳಿಸಿರುತ್ತಾನೆ. ನಾವು ಮೊದಲು ಆತ್ಮೀಕವಾದ ಅರ್ಥವನ್ನು ಸತ್ಯಕ್ಕೆ ತಕ್ಕಂತೆ ತಿಳಿಯುವುದು ಬಹಳ ಅವಶ್ಯವಾಗಿದೆ. ಯೇಸು ತಿಳಿಸಿದಂತೆ– ಬೀಜ = ದೇವರ ವಾಕ್ಯ, ಬಿತ್ತುವವನು = ದೇವರು ಮತ್ತು ಯೇಸುಕ್ರಿಸ್ತನು, ಹೊಲ/ನೆಲ

= ಜನರ ಮನಸ್ಸು/ಹೃದಯ, ಪಕ್ಷಿಗಳು = ಅನೀತಿವಂತರು, ಹಾಗೂ ಒಳ್ಳೆಯ ನೆಲ = ಕೇಳುವವರು, ತಿಳುಕೊಳ್ಳುವವರು ಮತ್ತು ನಡೆಯುವವರು.

(1) ದಾರಿಯ ಮಗ್ಗುಲಲ್ಲಿ ಬಿದ್ದವು :–

ಯಾವನಾದರೂ ದೇವರ ವಾಕ್ಯವನ್ನು ಕೇಳುವವರೇ ಅಲ್ಲದ ಸತ್ಯಕ್ಕೆ ತಕ್ಕಹಾಗೆ ಗ್ರಹಿಸಿಕೊಳ್ಳುವವರಲ್ಲ, ಇವರು ದೇವರ ವಾಕ್ಯವನ್ನು ಮನಸ್ಸಿಗೆ ಅಥವಾ ಹೃದಯಕ್ಕೆ ತೆಗೆದುಕೊಳ್ಳುವುದಿಲ್ಲ. ಇಂಥವರು ನಮ್ಮ ಮನಸ್ಸಿನ ಬುದ್ಧಿಶಕ್ತಿಯ ಆಲೋಚನೆಗೆ ಅವಕಾಶ ಕೊಡುವುದಕ್ಕೆ ಪ್ರಯತ್ನಿಸುವಾಗ ಬುದ್ಧಿಗೇಡಿತನವೂ, ಆತ್ಮೀಕವಾದ ಮಂದತ್ವವೂ, ಪ್ರಥಮದಲ್ಲಿಯೇ ಇವರನ್ನು ಆವರಿಸಿಕೊಂಡಿರುತ್ತದೆ. ಶರೀರ ಸಂಬಂಧವಾದ ಆಸೆಗಳು ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳಿಗೆ ಅವರು ಎಡೆಬಿಡದೆ ಮನಸ್ಸು ಮಾಡುವವರು. ಇಂಥವರೇ ದಾರಿ ಮಗ್ಗುಲಲ್ಲಿ ಬೀಜ ಬಿದ್ದವರು.

(2) ಬೀಜ ಬಿದ್ದ ಬಂಡೆಯ ನೆಲವಾಗಿರುವವರು :–

ದೇವರ ವಾಕ್ಯವನ್ನು ಕೇಳಿದ ಕೂಡಲೇ ಸಂತೋಷವಾಗಿ ಸ್ವೀಕರಿಸುತ್ತಾರೆ. ಆದರೆ ಪೂರ್ವಪರ ಯೋಚನೆಗಳ ಪರಿಜ್ಞಾನವಿರುವುದಿಲ್ಲ. ಸ್ವಲ್ಪಕಾಲದೊಳಗಾಗಿ ಆ ವಾಕ್ಯದ ನಿಮಿತ್ತ ಸಂಕಟವಾಗಲೀ, ಹಿಂಸೆಯಾಗಲೀ ಮತ್ತು ಶೋಧನೆ ಬಂದರೆ ಬೇಗ ಎಡವಿ ಬೀಳುವುದು ಇವರ ಲಕ್ಷಣ ಅಥವಾ ಸ್ವಭಾವವಾಗಿದೆ. ಇಂಥವುಗಳನ್ನು ಅವರು ಪ್ರಾರಂಭದಲ್ಲಿ ನೀರೀಕ್ಷಿಸಿರಲಿಲ್ಲ, ಅವರು ಸಂತೋಷದಿಂದ ಸ್ವೀಕರಿಸಿಕೊಳ್ಳುವುದೇ ಮುಖ್ಯವಲ್ಲ ಅದನ್ನೇ ನಂಬಿಕೆಯಿಂದ ಅಂಗೀಕರಿಸಬೇಕು. ಅನೇಕರು ಕ್ರಿಸ್ತನನ್ನು ಹಿಂಬಾಲಿಸಬೇಕೆಂದು ತವಕಪಟ್ಟು ಆತನ ಬಳಿಗೆ ಬಂದು ದೇವರ ವಾಕ್ಯವನ್ನು ಕೇಳುವಾಗ ಆತನ ಮಾತು ಮತ್ತು ಬೋಧನೆಯು ಅವರಿಗೆ ಅಧೈರ್ಯವನ್ನು ಹುಟ್ಟುಸಿರುವಂತೆ ಕಾಣುತ್ತದೆ. ಹೃದಯ ಪರಿವರ್ತನೆಯಾಗಲು ಅವಕಾಶವನ್ನು ಕೊಡುವುದಿಲ್ಲ ಇಂಥವರೇ ಬಂಡೆಯ ನೆಲವಾಗಿರುವವರು.

(3) ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು :–

ಒಬ್ಬನು ದೇವರ ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ, ಐಶ್ವರ್ಯದಿಂದ ಉಂಟಾಗುವ ಮಾನವೂ ಆ ವಾಕ್ಯವನ್ನು ಅಡಗಿಸಿಬಿಡಿವುದು. ಇವನು ಎರಡು ಮನಸ್ಸುಳ್ಳವನು, ಚಂಚಲನು ಆಗಿದ್ದು, ಎರಡು ವಿಧವಾದ ಮನಸ್ಸು, ಒಂದು ಕಾಲದಲ್ಲಿ ದೇವರನ್ನು, ಮತ್ತೊಂದು ಕಾಲದಲ್ಲಿ ಧನವನ್ನು ಸೇವಿಸುವಂತವರಾಗಿರುತ್ತಾರೆ. ಒಂದು ಕಾಲದಲ್ಲಿ ಮತಾಸಕ್ತಿಯೂ ಮತ್ತೊಂದು ಕಾಲದಲ್ಲಿ ಪ್ರಾಪಂಚಿಕ ಭಾವವೂ ಕಂಡುಬರುತ್ತದೆ. ಇಂಥವರು ಫಲವನ್ನು ಕೊಡದೆ ಇರುತ್ತಾರೆ, ಪ್ರಪಂಚದ ಚಿಂತೆಯೂ, ಐಶ್ವರ್ಯದಿಂದ ಉಂಟಾಗುವ ಮೋಸವು ಇತರ ವಿಷಯಗಳ ಮೇಲಣ ಆಸೆಗಳು ಮುಳ್ಳುಗಿಡಗಳಿಗೆ ಸಮಾನವಾಗಿರುವುದು ಎಂದು ತೋರಿಸಿಕೊಟ್ಟಿದ್ದಾನೆ. ನಾವು ದೇವರಲ್ಲಿ ಇಡಬೇಕಾದ ಆಸಕ್ತಿ ಮತ್ತು ಭಕ್ತಿಯನ್ನು ದೇವರ ರಾಜ್ಯದ ವಿಷಯವನ್ನು ಕೇಳುವಾಗ ಅದನ್ನು ಅನುಷ್ಠಾನಕ್ಕೆ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತೇವೆ. ಇವುಗಳು ನಮ್ಮನ್ನು ಅಡಗಿಸಬಿಡಬಹುದಲ್ಲದೆ ಫಲವಿಲ್ಲದವರನ್ನಾಗಿ ಮಾಡುತ್ತವೆ.

(4) ಬೀಜಬಿದ್ದ ಒಳ್ಳೆಯ ನೆಲವಾಗಿರುವವನು :–

ದೇವರ ವಾಕ್ಯವನ್ನು ಕೇಳಿ ಸತ್ಯಕ್ಕೆ ತಕ್ಕಹಾಗಿ ಗ್ರಹಿಸಿ ಅದರ ಪ್ರಕಾರ ಅನುಷ್ಠಾನಕ್ಕೆ ತೆಗೆದುಕೊಂಡು ತನ್ನ ಸುಗುಣಗಳ ಮೂಲಕ ಅದನ್ನು ಪ್ರಕಟಕ್ಕೆ ತರುವಂತವನಾಗಿದ್ದಾನೆ. ಮೊದಲು ದೇವರ ರಾಜ್ಯಕ್ಕಾಗಿ ನೀತಿಗಾಗಿಯೂ ತವಕಪಡುವವನು ಹಾಗೂ ತನ್ನ ದೇವರಾಗಿರುವ ಕರ್ತನನ್ನು ಪೂರ್ಣಹೃದಯದಿಂದಲೂ, ತನ್ನ ಪೂರ್ಣಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ದೇವರ ಆಜ್ಞೆಯನ್ನು ಅಂಗೀಕರಿಸಿಕೊಂಡು ವಿಧೇಯತೆಯಿಂದ ಅದನ್ನು ಅನುಸರಿಸುವವನಾಗಿರುತ್ತಾನೆ. ನಾವು ದೇವರ ಮುಂದೆ ದೀನ ಮನಸ್ಸುಳ್ಳವರಾಗಿ ಕಾಣಿಸಿಕೊಳ್ಳಬೇಕು. ದೇವರ ಆಜ್ಞೆಗಳನ್ನು ಅನುಸರಿಸಿ ನಡೆಯುವುದೇ ನಮ್ಮ ಆದ್ಯ ಕರ್ತವ್ಯವಾಗಿದೆ. ಇವನೇ ಒಳ್ಳೆಯ ನೆಲವಾಗಿರುವನು.

ಮುಖ್ಯ ಸಾರಾಂಶ :–

(1) ಬಿತ್ತುವವನು ದೇವರು ಮತ್ತು ಕ್ರಿಸ್ತನು ಇವರ ವಿಚಾರದಲ್ಲಿ ಯಾವ ದೋಷವಿರುವುದಿಲ್ಲ.

(2) ದೇವರ ವಾಕ್ಯವು ಪರಿಶುದ್ಧವಾದದ್ದು, ಸತ್ಯವಾದದ್ದು ಅದನ್ನು ಕಲಬೆರಕೆ ಮಾಡಬಾರದು.

(3) ಯೇಸುಕ್ರಿಸ್ತನು ವಿವರಿಸಿದಂತೆ ಮಾನವರ ಸ್ವಭಾವಗಳಲ್ಲಿ ಕಂಡುಬರುವ ನಾಲ್ಕು ವಿಧಗಳನ್ನು ತಿಳಿಸುತ್ತದೆ.

(4) ದೇವರ ರಾಜ್ಯದ ವಿಷಯಗಳಿಗೆ ಬದಲಾಗಿ ಪ್ರಾಪಂಚಿಕ ಸ್ಥಿತಿಗತಿಗಳಲ್ಲಿಯೇ ಭರವಸವಿಟ್ಟುಕೊಂಡಿದ್ದರು. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವ ಸಿದ್ಧವಾದ ಕೋಪಕ್ಕೆ ಗುರಿಯಾಗಿದ್ದೆವು.

(5) ಅನೇಕ ಸಾರಿ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಅಯೋಗ್ಯವಾದ ಕಾರ್ಯಗಳಿಗಾಗಿ ವಿನಿಯೋಗಿಸಿರುತ್ತೇವೆ. ನಮ್ಮ ಜೀವಿತದಲ್ಲಿ ಅನೇಕ ಮುಳ್ಳು, ಕಳೆಗಳನ್ನು ಕಿತ್ತು ಹಾಕಬೇಕಾಗಿದೆ.

(6) ದೇವರ ವಾಕ್ಯವನ್ನು ಕೇಳಿದ ತಕ್ಷಣವೇ ನೀತಿವಂತರಾಗುವುದಿಲ್ಲ. ಆದರೆ ಅದನ್ನು ನಂಬಿಕೆಯಿಂದ, ಸಿದ್ಧಮನಸ್ಸಿನಿಂದ ಸ್ವೀಕರಿಸಿ ಅನುಷ್ಠಾನ ತೆಗೆದುಕೊಳ್ಳುವುದರಿಂದಲೇ.

(7) ನಮ್ಮಲ್ಲಿರುವ ಮೂಢಭಕ್ತಿ, ತಾತ್ಸಾರ, ಅಹಂಕಾರ, ಪರಸ್ಪರ ವಿರೋಧ ಈ ಮುಂತಾದ ಕೆಟ್ಟ ಸ್ವಭಾವಗಳನ್ನು ತೆಗೆದುಹಾಕಿ ಹದವಾದ ಒಳ್ಳೆಯ ನೆಲದಂತೆ ಇದ್ದು ಫಲ ಕೊಡುವವರಾಗಬೇಕು.

(ಸತ್ಯವೇದ ಆಧಾರಿತ) ವೈ.ನರೋನ್ ದೇವಪ್ರಸಾದ್
ಮಂಡ್ಯ